ನಮ್ಮ ಪ್ರಾಚೀನ ಪುಣ್ಯವಿದ್ಯೆಗಳಲ್ಲೊಂದಾದ ಆಯುರ್ವೇದವು ನಮ್ಮ ಭರತಖಂಡದಲ್ಲಿ ನಮ್ಮ ದುರದೃಷ್ಟ ವಿಶೇಷದಿಂದಕ್ಷೀಣವಾಗುತ್ತ ಬಂತಷ್ಟೆ? ಇಂತಹ ಪುಣ್ಯ ವಿದ್ಯೆಯ ಮಾಲಿನ್ಯವನ್ನು ದೂರೀಕರಿಸಿ ಪೂರ್ವದಂತೆ ಇದರ ಜಯಪತಾಕೆಯನ್ನು ಗಗನಾಂಗಣದಲ್ಲಿ ಮೆರೆಯಿಸಲು ಈಗ ಹಲವಾರು ವರ್ಷಗಳ ಕೆಳಗೆ ಭಾರತ ವೈದ್ಯ ವಿದ್ವಜ್ಜನರು "ನಿಖಿಲಭಾರತ ವರ್ಷೀಯ ಆಯುರ್ವೇದ ಮಹಾಸಮ್ಮೇಳನ" ಎಂಬದೊಂದು ಸರ್ವತ್ರ [illegible] ಸಭೆಗಳ ಅಂಗಗಳಿಂದ ಕಾರ್ಯವನ್ನು ನಡೆಸುತ್ತಿರುವರು. ಈ ಮಹಾಸಭೆಯ ಅಂಗವಾಗಿ "ನಿಖಿಲಭಾರತ ವರ್ಷೀಯ ಆಯುರ್ವೇದ ವಿದ್ಯಾಪೀಠ" ಎಂಬ ಸಂಸ್ಥೆಯನ್ನು ತೆರೆದು ಪುಣ್ಯವಿದ್ಯೆಯ ಪ್ರಸರವನ್ನು ಕೈಗೊಂಡಿರುವರು. ಎಲ್ಲಾ ಪ್ರಾಂತಗಳಲ್ಲಿಯೂ ಕಾಂಗ್ರೆಸ್ಸಿನ ಪ್ರಣಾಳಿಕೆಯಂತೆ ಪ್ರಾಂತಿಕ ಸಭೆಗಳು ಕಾರ್ಯನಡೆಸುತ್ತಿರುವವು. ಈಗಾಗಲೇ ನಮ್ಮ ನೆರೆಯಲ್ಲಿರುವ ಆಂಧ್ರಪ್ರಾಂತವು ಐದು ಪ್ರಾಂತಿಕ ಸಭೆಗಳನ್ನು ನಡೆಸಿ ಇದೇ ವರ್ಷ ಆವಿದ್ಯಾ ಪ್ರಸಾರಕ್ಕಾಗಿ "ಆಂಧ್ರ ಆಯುರ್ವೇದ ವಿದ್ಯಾಪೀಠ" ವನ್ನು ಸ್ಥಾಪಿಸಿರುವದು. ನಮ್ಮ ಕರ್ನಾಟಕದಲ್ಲಾದರೋ ನಿಖಿಲಕರ್ನಾಟಕ ವೈದ್ಯರು ಸೇರಿ ಒಂದಾನೊಂದು ವೈದ್ಯ ಸಮ್ಮೇಳನವನ್ನು ನಡೆಸಲಿಲ್ಲವೆಂದರೆ ಇದಕ್ಕಿಂತಲೂ ಬೇರೊಂದು ಅವನತಿಯು [illegible] ದಿಲ್ಲ. ಅಯ್ಯೋ! ಬರಿ ಜನರು ಈ [illegible] ಲ್ಲಿ ಆಯುರ್ವೇದ ನಾಮವನ್ನೇ [illegible]? ದೇಶೀಯ ವಸ್ತ್ರ ಪ್ರಸಾರದಂತೆ ದೇಶೀಯ ವೈದ್ಯಕೀಯ ಪ್ರಸಾರವೂ ಮಹತ್ವದ ಸಂಗತಿಯಾಗಿದೆ. ಈ ಕನ್ನಡ ನಾಡಿನಲ್ಲಿ ಮೈಸೂರು [illegible] ಆಯುರ್ವೇದಕ್ಕೆ ಸ್ವಲ್ಪ ಉತ್ತೇಜನ [illegible] ಯವಾ

ದರೂ ನಿಜತತ್ವವನ್ನು ತಿಳಿದರೆ ಆಯುರ್ವೇದಕ್ಕೆ ಕು ರಾರವೇ ಬಿದ್ದಿರುವುದು, ಇದು "ಮೈಸೂರು ಆಯುರ್ವೇದ" ಎಂಬ ಮುಂದಿನ ಲೇಖದಲ್ಲಿ ಬರೆಯಲ್ಪಡುವುದು. ಪ್ರಕೃತ ಕರ್ನಾಟಕ ರಾಷ್ಟ್ರದಲ್ಲಿರುವ ದೇಶಿಯ ವೈದ್ಯ ವಿದ್ವಜ್ಜನರೂ, ವೈದ್ಯಾಭಿಮಾನಿಗಳೂ, ದೇಶಪತ್ರಿಕೆಗಳೂ ಆಯುರ್ವೇದೋನ್ನತಿಗೆ ಈ ಪ ಉಪಕಾರಿಗಳಾಗಬೇಕೆಂದು ನಂಬುತ್ತೇನೆ ಹಾಗೂ ಬರುವ ಏಪ್ರಿಲ್ ತಾ ೧೨-೧೪-೧೫ ದಿವಸಗಳಲ್ಲಿ ರಾಜಮಹೇಂದ್ರದಲ್ಲಿ ನಡೆಯುವ ೧೪ನೇ ಸಿಖಿಲ ಭಾರತ ವರ್ಷೀಯ ವೈದ್ಯ ಸಮ್ಮೇಳನಕ್ಕೆ ಕರ್ನಾಟಕ ವೈದ್ಯರು ಸಮ್ಮಿಳಿತರಾಗಬೇಕೆಂದು ಕೋರುತ್ತೇನೆ.

ಪಂ. ರಂಗ ಶೇಷಶಾಸ್ತ್ರಿ ಆಯುರ್ವೇದ ರತ್ನಂ ಶೃಂಗೇರಿ.

ಜಾಹೀರ ವಿನಂತಿ.

—o—

(ಲೇಖಕ- ಏಕ್ನಾಲರಾವ ಜೋಶಿ ಅ, ಜಿ, ಕಾ, ಕ,)

ಜಿಲ್ಹಾ ತಾಲೂಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರು ಈ ಕೆಳಗಿನಂತೆ ತಿಳಿಸುತ್ತಾರೆ.

ನಮ್ಮಲ್ಲಿಯ ಶುದ್ಧ ಸ್ವದೇಶಿಯಂತಹ ಖಾದಿಯ ಖಿರೀದಿ ಅಂಗಡಿಗಳ ವಿಷಯವಾಗಿ ನಮ್ಮ ಕಡೆಗೆ ಅನೇಕ ಪತ್ರಗಳು ಬಂದಿರುವವು. ಅವುಗಳಲ್ಲಿ ಮಾಲು ಶುದ್ಧ ಕೈನೂಲಿನಿಂದ ಹಾಗೂ ಕೈಮಗ್ಗದ ಮೇಲೆ ಆದವುಗಳೆಂದು ನಾವು ಖಾತ್ರಿಯಿಂದ ಹೇಳಬೇಕೆಂದು ಆ ಭಾಗಗಳಲ್ಲಿಯ ಖಿರೀದಿ ವರ್ತಕರು ಸಿಬಂದ್ಯರಿಗೆ ಜನರನ್ನು ಪಡಿಸುತ್ತಿರುವರು. ಈ ಕಾರಣದಿಂದಲೇ ಕಾಂಗ್ರೆಸ ಕಮಿಟಿಯವರು ಊರಲ್ಲಿ ಒಂದು ಡಿಪೋ ಮಾಡಿರುವರು. ನಮ್ಮಲ್ಲಿ ಸಾಧ್ಯವಾದಷ್ಟು ಮಾಲು ಇದ್ದು ಅದು ಶುದ್ಧವಿರುವದೆಂದು ನಾವೇ ತಿಳಿಸುವೆವು. ನಿಮಗೆ ಬೇಕಾದ ಮಾಲು ತಿಳಿಸಿದರೆ ನಾವು ನಿಮಗೆ ಸ್ವರವಿತ ಮಾಡಿ ಕೊಡಲಿಕ್ಕೆ ಪ್ರಯತ್ನಿಸುವೆವು. ನಮ್ಮ ಮಗ್ಗಗಳ ಮೇಲೆ ತಯಾರಾದ ಲಟ್ಟಿನ ವ ಕೋಟಿನ ಅರಿವೆಗಳು ಹಾಗೂ ಮಗ್ಗಶಾಲೆಗಳು ವ ಟಾವೆಲ್ಲುಗಳು ನಮ್ಮ ಹತ್ತರ ಸಿಗುತ್ತವೆ. ಅತಿಶಯ ಚಿಕ್ಕದಾದ ಕೈನೂಲು ಸಿಗುವದು ಬಹಳ ಕಠಿಣ. ಕೈನೂಲೆಂದು ಹೇಳಿಯೂ ಮಾರುವದೆಲ್ಲವೂ ವರಜೋಡಿ ನೂಲಿನಿಂದ ಆಗಿದ್ದು ಇರುತ್ತದೆ. ಕೈನೂಲಿನ ಉಪಯೋಗವಾಗುವಂಥ ಬಟ್ಟೆಗಳು ವಾರಿಗೆ ೧೦-೧೧ ಆಣೆಯಂತೆಯೂ ೩೦ ನಂಬರಿನ ಕೈನೂಲಿನ ಬಟ್ಟೆಗಳು ೧೫ ಆಣೆಯಿಂದ ೧-೩ ಆಣೆಯಂತೆಯೂ ಸಿಗುವದು. ನೀವು ತಿಳಿಸಿದರೆ ನಾವು ನಿಮಗೆ ಬೇಕಾದಂತೆ ಸಹಾಯವನ್ನು ಮಾಡುವೆವು.

ಅಮೂಲ್ಯ ಸಂಧಿ!

ಆತಂಕನಿಗ್ರಹ ಮಾತ್ರೆಗಳು.

ಅತ್ಯುತ್ತಮ ...

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ ಗದಗ.

—

ಮಹಾಶಯರೇ!

ತಾರೀಖು ೨೬-೩-೨೨ ನೇ ದಿವಸ ಗದಗಿನಲ್ಲಿ ಪ್ರಾಂತಿಕ ಕಚೇರಿಯಲ್ಲಿ ಕ, ಪ್ರಾ, ಕಾಂ, ಕ, ವಿಶೇಷ ಅಧಿವೇಶನವು ೪ ಘಂಟೆಗೆ ಸದ್ಯಸ್ಥಿತಿಯ ವಿಚಾರದ ಬಗ್ಗೆ ನಡೆಯುವದು. ಕಾರ್ಯಕಾರಿ ಮಂಡಳಿಯ ತಾ|| ೧೯ ರ ಬದಲಾಗಿ ತಾ| ೨೬-೩-೨೨ ನೇ ಇದೇ ದಿವಸವೇ ಮುಂಚಿತವಾಗಿ ೩ ಘಂಟೆಗೆ ಕೂಡುವದು.

ಕೋರಮ ಆಗದಿದ್ದರೆ ಮರುದಿವಸವೇ ಈ ಎರಡೂ ಮಂಡಳಿಗಳ ಅಧಿವೇಶನವು ಜರುಗುವದು.

ಗದಗ | ನಾರಾಯಣರಾವ ಜೋಶಿ
ತಾ|| ೧೪-೩-೨೨ | ಗ, ಕ, ಪ್ರಾ, ಕಾ, ಕ.

ಮುಂಬಯಿ ಕೌನ್ಸಿಲದಲ್ಲಿ
ಪ್ರೊ. ರಂಗನಾಥ ರಾಮಚಂದ್ರ ದಿವಾಕರರು.

—(೮)—

ಮುಂಬಯಿ ಕೌನ್ಸಿಲಿನಲ್ಲಿ ಮಿ. ತ್ರಿವೇದಿಯವರು ಪ್ರೊ. ದಿವಾಕರರ ಸಂಬಂಧದಿಂದ ಕೇಳಿದ ಪ್ರಶ್ನೆಗಳಿಗೆ ನಾಮದಾರ ಗವರ್ನರರು ಕೊಟ್ಟ ಉತ್ತರ.

೧ ಪ್ರೊ. ದಿವಾಕರರು ಗೋಕಾವಿಯಲ್ಲಿ ಆರೋಪಿಗಳಲ್ಲಿದ್ದರೇನು? ಉತ್ತರ. ಹೌದು.

೨ ಬಿಡಲ್ಪಟ್ಟರೋ? ಉತ್ತರ. ಹೌದು.

೩ ಕ್ರಿಮಿನಲ ೧೨೪ ಅ ಪ್ರಕಾರ ಹಿಡಿಯಲ್ಪಟ್ಟರೋ? ಉ. ಹೌದು

ಅಜೀರ್ಣವನ್ನು ಹೋಗಲಾಡಿಸಿ, ಶುದ್ಧವಾದ ರಕ್ತವನ್ನುಂಟು ಮಾಡಿ ದೇಹವನ್ನೂ, ಬುದ್ಧಿ ಇತ್ಯಾದಿಗಳನ್ನೂ, ಅಭಿವೃದ್ಧಿ ಪಡಿಸುವದಲ್ಲದೆ, ನಾವಿರಾರು ಜನರು ಅನುಕೂಲ ಗುಣಗಳನ್ನು ಹೊಂದಿರುವರು. ಒಂದು ರೂಪಾಯಿ ಕೊಟ್ಟು ಈ ಎಲ್ಲ ಅನುಭವಗಳನ್ನು ಪಡೆಯಬಹುದು. ಇದಲ್ಲದೆ ನಮ್ಮ ಇತರ ಅಂದರೆ ಸಕಲವಾದ ಔಷಧಿಗಳ ತಿಳುಹಿಸುವದಕ್ಕಾಗಿ ಈ ಕೆಳಗಿನ ಅಡ್ರೆಸಿಗೆ ಬರೆಯಬೇಕೆಂದು ತಿಳುಹಿಸುವೆವು.

ನಮ್ಮ ವಿಳಾಸ—
ಆತಂಕನಿಗ್ರಹ ಔಷಧಾಲಯ
೨೬ ಥಂಬುಚೆಟ್ಟಿ ಮದರಾಸು.

---

೪ ಆ ಚಾರ್ಜ ತಿರುಗಿತೋ ? ಉ. ತಿರುಗಿ ತೆಗೆದುಕೊಂಡಿತು.

೫ ತಿರುಗಿದ್ದರೆ ಯಾಕೆ? ಉ. ರಿಪೋರ್ಟ ಕೇಳಿದೆ ಇನ್ನೂ ಬಂದಿಲ್ಲ.

೬ ಆ ಬಾಬತು ಕೌನ್ಸಿಲ ಮುಂದೆ ರಿಪೋರ್ಟು ಬಂದರೆ ಸರಕಾರ ಮನಸಿಗೆ ಬರುವದೋ? ಉ. ಇಲ್ಲ.

೭ ೧೫೪ ಪ್ಯಾಟ್ ಲಕ್ಷಕ ೧೦ಲಗಂತೆ ಶಿಕ್ಷೆ ಯಾಯಿತೋ ? ಉತ್ತರ ಜಾಮೀನ ಕೊಡದ್ದರಿಂದ ಶಿಕ್ಷೆಯಾಯಿತು.

ನೋಟಿಸಿನದರಗಳು.

೧ನೆ ಸಲಕ್ಕೆ ಲಯಿನ ಎಂಟು ಸಳಿಗಳಿಗೆ ಒಂದೂವರೆ ರೂಪಾಯಿ; ಮುಂದೆ ಪ್ರತಿಯೊಂದು ಸಳಿಗೆ ಎರಡು ಆಣೆ; ಇಂಗ್ಲಿಷ ಪ್ರತಿಯೊಂದು ಸಳಿಗೆ ಆರು ಆಣೆ ಇಂಗ್ಲಿಷದಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ಏಳು ಆಣೆ. ದಟ ಲೈನ್ ಲಯಿನ ಒಳಗಳಿಗೆ ಅನುಭವಿಸಿ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು. ವ್ಯಾ. ವಿ. ಧಾರವಾಡ.

ವಿಜಯದ ವರ್ಗಣೀದರ.

ನಿತ್ಯಪತ್ರಕ್ಕೆ	೧೨	ತಿಂಗಳಿಗೆ	೧೨-೮-೦ ರೂ.
"	೬	"	೬-೦-೦ ರೂ.
"	೩	"	೪-೦-೦ ರೂ.
"	೧	"	೧-೮-೦ ರೂ.

ವಾರಪತ್ರಕ್ಕೆ ವಾರ್ಷಿಕ ವರ್ಗಣಿ ೩-೧೨-೦ ರೂ.

ವಿಶೇಷಮಾಹಿತಿಗಳಿಗಾಗಿ ವಿಳಾಸಕ್ಕೆ.

ಮ್ಯಾ. ವಿಜಯ

ಶುದ್ಧ ಕೈನೂಲಿನ ಖಾದೀ ಪ್ರಸಾರವೇ ಸ್ವರಾಜ್ಯದ ಮೆಟ್ಟು!
ಹಿಂದೂ-ಮುಸಲ್ಮಾನರ ಐಕ್ಯವೇ ಸ್ವರಾಜ್ಯದ ಮೆಟ್ಟು!!
ಅಹಿಂಸಾಮಯ ಅಸಹಕಾರವೇ ಸ್ವರಾಜ್ಯದ ಮೆಟ್ಟು!!!

ವಂದೇ ಮಾತರಂ



ಅಲ್ಲಾ ಹೊ ಅಕಬರ

॥ ಓಂ ॥

ಶಾಂತಿಃ! ಶಾಂತಿಃ!! ಶಾಂತಿಃ!!!

ಅಸಹ ಯಜ್ಞಾಹುತಿಯಲ್ಲಿ ಕೊನೆಯ ದೊಡ್ಡ ಆಹುತಿ.

ಯುವರಾಜರು ನವ್ಹಂಬರ ೧೭ನೇ ತಾರೀಖಿಗೆ ಹಿಂದುಸ್ಥಾನದಲ್ಲಿ ಕಾಲಿಟ್ಟರು. ಮಾರ್ಚ ೧೭ನೇ ತಾರೀಖಿಗೆ ಹಿಂದುಸ್ಥಾನದ ಹೊರಗೆ ಕಾಲಿಟ್ಟರು. ಅಂದರೆ ಸಂಪೂರ್ಣ ನಾಲ್ಕು ತಿಂಗಳು ಹಿಂದುಸ್ಥಾನದಲ್ಲಿದ್ದರು. ಅವರು ಬಂದಂದಿನಿಂದ ಇಲ್ಲಿಯ ಅಧಿಕಾರೀ ವರ್ಗದವರು ಒಂದೇಸವನೆ ಅಸಹ ಯಜ್ಞಾಹುತಿಗಳನ್ನು ಹಾಕುತ್ತಲೆ ಹೋದರು. ಅವರಲ್ಲಿ ಹಿಂದುಸ್ಥಾನದ ಮುಖಂಡರಲ್ಲಿ ಎಲ್ಲರೂ ಮುಗಿದು ಹೋಗಿದ್ದರೂ ಯುವರಾಜರು ಮಾರ್ಚ ೧೭ನೇ ತಾರೀಖಿಗೆ ಹೋದರು.

ಅಧಿಕಾರೀ ವರ್ಗದವರು ಅಸಹ ಯಜ್ಞವನ್ನು ಮುಗಿಸುವ ಕಾಲಕ್ಕೆ ಪೂರ್ಣಾಹುತಿಗೆಂದು ಕೊನೆಗೆ ದೊಡ್ಡದೊಂದು ಮಹಾತ್ಮರ ಆಹುತಿಯನ್ನು ತೆಗೆದುಕೊಂಡು ಅವಭೃತ ಸ್ನಾನ ಮಾಡಿದರು

ನವ್ಹಂಬರ ೧೮ನೇ ತಾರೀಖಿಗೆ

ಮ. ಮೋಹನಚಂದ ಕರ್ಮಚಂದ ಗಾಂಧಿ ಇವರಿಗೆ
೬ ವರ್ಷಗಳ ಸಾದಾ ಶಿಕ್ಷೆಯಾಯಿತು
ಶ್ರೀ. ಶಂಕರರಾವ ಬ್ಯಾಂಕರ ಇವರಿಗೆ ೧ ವರ್ಷದ
ಸಾದಾ ಶಿಕ್ಷೆಯೂ ೧ ಸಾವಿರದ ದಂಡವೂ ಆಯಿತು.

ಈ ಪತ್ರವನ್ನು ಸತ್ಯಬೋಧ ರಾಮಾನಂದ ಆಡಬಿಸಿ ಇವರು ಧಾರವಾಡದಲ್ಲಿ ತಮ್ಮ ವಾರ್ತಾಪತ್ರಸ್ಥಾನದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

ನಿತ್ಯ ಪತ್ರ

- ಸ್ಥಾಪಕರು -

ಶ್ರೀ ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

(೧೯೨೦)

ಬೆಲೆ ಒಂದು ಆಣೆ

ವರ್ಷ ೩) ಧಾರವಾಡ, ಸೋಮವಾರ ತಾ|| ೩೦ ನೇ ಮಾರ್ಚ ೧೯೨೦. (ಸಂಚಿಕೆ ೬೪

ಹಿಂದುಸ್ಥಾನ ಸರಕಾರದ ಅಂದಾಜಪತ್ರಕವು.

—೦೫(೦)೫೦—

ಅದಕ್ಕೆ ಸಮ್ಮತಿಯನ್ನು ಕೊಡುವವನು
ಹಿಂದುಸ್ಥಾನದ ಹಿತಶತ್ರುವು.

———೦———

ಹಿಂದುಸ್ಥಾನದ ಫಡಣವೀಸ ಸರಮಾಲಕಮ್ ಹೆಲಿ ಸಾ|| ರವರು ಹಿಂದುಸ್ಥಾನದ ಅಂದಾಜಪತ್ರಕವನ್ನು ಕೌನ್ಸಿಲಿನ ಮುಂದಿಟ್ಟಿರುವರು. ವಾದ ವಿವಾದ ನಡೆದಿದೆ. ಆ ಸಂಬಂಧದಿಂದ-ಟಾಯಿಮ್ಸ್ ಆಫ್ ಇಂಡಿಯಾದಂಥ ಸರಕಾರ ಪತ್ರವು ಸಹ ಈ ಸಾರಿಯ ಅಂದಾಜುಪತ್ರಕ್ಕೆ ಸಮ್ಮತಿಯನ್ನು ಕೊಡುವವನು ಹಿಂದುಸ್ಥಾನದ ಹಿತಶತ್ರುವು ಎಂದು ಅಂದಿರುತ್ತದೆ. ಈಸಾರಿಯ ಅಂದಾಜಪತ್ರಕ್ಕೆ ಅಂಗ್ಲೋ ಇಂಡಿಯನ್ ಪತ್ರಗಳು ಸಹ ಒಪ್ಪಿಗೆಯನ್ನೀಯಲಿಲ್ಲ. ಸರಕಾರ ಪಕ್ಷದ ಕೌನ್ಸಿಲರರು ಸಹ ಅದಕ್ಕೆ ಹೆಸರಿಟ್ಟರು. ಯಾರು ಅಲುವ ಬಜೆಟ್ಟೆಂದರೆ, ಯಾರು ಅಪಸಕೆಯ ಬಜೆಟ್ಟ ಎಂದರು. ಯಾರು ದಿವಾಳಖೋರಿಯ ಬಜೆಟ್ಟೆಂದರೆ, ಯಾರು ಬಡಬಗ್ಗರ ಕಿಸೆಕತ್ತರಿಸುವ ಬಜೆಟ್ಟೆಂದರು. ಹೀಗೆ ಪ್ರತಿಯೊಬ್ಬರು ಅದಕ್ಕೆ ಒಂದಿಲ್ಲೊಂದು ತರದಿಂದ ಹೆಸರಿಟ್ಟರೇ ಹೊರತು ಸಮಯಾದ ಬಜೆಟ್ಟೆಂದು ಒಬ್ಬರೂ ಅನ್ನಲಿಲ್ಲ. ಜನಾ ಸರಕಾರದ ಕೌನ್ಸಿಲರರಲ್ಲಿ ಡೆಮಾಕ್ರೆಟಿಕ ಪಾರ್ಟಿ ಯೆಂಬದೊಂದು ಪಾರ್ಟಿಯೇ ಆಗಿದೆಯಷ್ಟೇ? ಅವರಂತೂ ಈ ಬಜೆಟ್ಟಿಗೆ ಪೂರ್ಣ ವಿರೋಧವನ್ನೇ ಮಾಡುವಕೃತ ನಿಶ್ಚಯಮಾಡಿರುವರು.

ಅವರ ಈಕೃತನಿಶ್ಚಯವನ್ನು ಕಂಡೋ ಏನೋ ಈಗ ಕೌನ್ಸಿಲಿನ ಸಭಾಸದರಲ್ಲಿ ಹೊಸದೊಂದು ಪಕ್ಷವು ನಿರ್ಮಾಣವಾಗಿದೆ. ಅದೂ ಹೊಸದಾಗಿಯೇ ಈಗೀಗ ಅವಸರವಸರದಿಂದ ನಿರ್ಮಾಣವಾಗಿ, ಈ ಹೊಸ ಪಕ್ಷದ ನಿರ್ಮಾಣದ ಶ್ರೇಯಸ್ಸು ನಾ. ಪುರ್ಥ್ಯಾಗೇಶ್ವರದು ನಾ. ಸಮರ್ಥರು ಇವರಿಗೆ ಸಲ್ಲಬೇಕು. ಈ ಪಕ್ಷದ ಪ್ರಮುಖರು ನಾ. ಶಿವಸ್ವಾಮಿ ಅಯ್ಯರರು. ಅವರನ್ನುಳ್ಳವರ ಗುಂಪಿಗೆ ಲಿಬರಲರೆಂದು ನಾ. ಶಾಸ್ತ್ರಿಯವರಂತೆ ಅವರೂ ಅರ್ಜಿಸಿಂಪರಂತೆ ಹೋಗತಕ್ಕವರಿರುವರು. ...ರಲ್ ಪಕ್ಷದ ಸಕ್ರೆಟರಿಗಳಂತೂ ಅವ್ವನವರ ಪ್ರಸ್ತಾವ ಕೇಳಿ ಒಮ್ಮನದಾಸರು. ಈ ಹೊಸ ನ್ಯಾಶನಲ್ ಪಕ್ಷದ ಧೋರಣೆಯಿಂದಲೆ ಪಕ್ಷವಾದಲ್ಲಿ ವಿರೋಧ ಮಾಡಿದರೂ, ಅವರಿಗೆ ಆತಂಕಮಾಡುವದಿಲ್ಲ.

ಅಂತೂ ಹಿಂದುಸ್ಥಾನ ಸರಕಾರದ ಪಕ್ಷದವರು ವ್ರ ಸಕ್ತ ಸರಕಾರ ದ ಯೋಗ್ಯ ಸ ಮ ಯ ದ ಲ್ಲಿ ಅನುಕೂಲಪಕ್ಷ. ಹೀಗೆ ಪಕ್ಷಗಳಾಗಿರುವದೆಂದನ್ನಬಹುದು. ಸರಕಾರ ಪಕ್ಷದವರು ಈಗ ಮುಂದೆ ಹಿಂದ ಅಂದಾಜ ಪತ್ರಕವನ್ನು ಹಿಂದೆ ತೆಗೆದುಕೊಳ್ಳುವದಿಲ್ಲವೆನ್ನುತ್ತಲೆ ... ಪಕ್ಷವು ಅದನ್ನು ಮಾಡುವೆಲ್ಲವೆನ್ನುತ್ತಲೆ ... ರ ಪಕ್ಷಗಳಲ್ಲಿ ಈಗ ಹೊಸದಾಗಿ ತಯಾರಾದ ನ್ಯಾಶನಲ್ ಪಕ್ಷವು ಯಾವ ಪಕ್ಷಕ್ಕೆ ಕೂಡುವದೋ ಆ ಪಕ್ಷಕ್ಕೆ ಜಯವಾಗುವದು ನಿಂಶಿತವಾದದ್ದು. ಈ ಅಂದಾಜು ಪತ್ರಕ್ಕೆ ಸಮ್ಮತಿಯನ್ನು ಕೊಡುವದಂತೂ ರಾಷ್ಟ್ರಕ್ಕೆ ಅಪಾಯಕಾರಿಯೆಂದು ಎಲ್ಲರೂ ಅನ್ನುವರು. ಅಂದಬಳಿಕ ಹೊಸ ಪಕ್ಷದವರು ಯಾವ ಪಕ್ಷಕ್ಕೆ ಕೂಡುವರೋ ನೋಡಬೇಕಾಗಿದೆ. ಈ ಹೊಸ ಪಕ್ಷವಂತೂ ಲಿಬರಲರಿಗೆ ಆತಂಕಮಾಡಬಾರದೆನ್ನುವದು. ಅಷ್ಟರಿಂದ ತಿಳಿದಷ್ಟೇ ಆಷೆ. ಆದರೂ ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಡವೆ?

—

ಗೂಳಿ ಬಿದ್ದಬಳಿಕ- ಆಳಿಗೊಂದು ಕತ್ತಿ,

—

ಮಿ, ಮೊಂಟೆಗ್ಯೂ ಸಾಹೇಬರವರು ರಾಜೀನಾಮೆಯನ್ನು ಕೊಟ್ಟರು. ಲಾರ್ಡ ಕರ್ಜನರವರ ಕಾರಸ್ಥಾನದಿಂದ ರಾಜೀನಾಮೆಯನ್ನು ಕೊಟ್ಟರು. ಏಕಾಏಕ ಸಂಬಂಧದಿಂದ ರಾಜೀನಾಮೆಕೊಟ್ಟರು. ಹಿಂದುಸ್ಥಾನ ಸರಕಾರಕ್ಕೆ ಬೆಂಬಲವಿತ್ತು ರಾಜೀನಾಮೆ ಕೊಟ್ಟರು. ಗೂಳಿ ಬಿದ್ದಬಳಿಕ ಆಳಿಗೊಂದು ಕತ್ತಿಯಂತೆ ಮಿ. ಮೊಂಟೆಗ್ಯೂ ಸಾಹೇಬರವರ ಮೇಲೆ ಟೀಕಾಸ್ತ್ರದ ಮಳೆಗರೆಯುತ್ತಿದೆ. ವಿಲಾಯತಿ ಪತ್ರಗಳ ಸಾಮಾನ್ಯತಃ ಅಭಿಪ್ರಾಯಗಳನ್ನು ಇದರಡಿಯಲ್ಲಿ ಕೊಟ್ಟಿದ್ದೇವೆ.

ಲಂಡನ್ ಟಾಯಿಮ್ಸ್— ಲಾರ್ಡ ಕರ್ಜನರು ತಮಗೆ ಗೊತ್ತಿದ್ದೂ ಇನ್ನುಳಿದ ಮಂತ್ರಿಗಳಿಗೆ ಯುಪದೇಶ ಬಿಟ್ಟಿದ್ದಾರೆ.

ಡೇಲೀಮೇಲ — ಮಿ, ಮ್ಯಾಂಟೆಗ್ಯೂರವರಿಂದ ತಪ್ಪಾಗಿದ್ದರೂ ಲಾರ್ಡರೀಡಿಂಗರಿಂದ ತಪ್ಪಾಗಲಿಲ್ಲ.

ಡೇಲೀ ಟೆಲಿಗ್ರಾಫ— ಎಲ್ಲ ಜವಾಬುದಾರಿಯು ಮಿ, ಮ್ಯಾಂಟೆಗ್ಯೂರವರ ತಲೆಯಮೇಲಿದೆ. ಲಾರ್ಡಕರ್ಜನರ ಉದ್ಗಾರಗಳು ಸರಿಯುವೆ.

ಮಾರ್ನಿಂಗಪೋಸ್ಟ— ಮಿ. ಮ್ಯಾಂಟೆಗ್ಯೂ ಸಾಹೇಬರ ಈ ಅವಿವೇಕವು ಬೇಕೆಂತಲೇ ಮಾಡಿದ್ದು ಇದೆ.

ಲಾಡ್ನಕ್ರಾನಿಕ್ಲ — ಮಿ. ಮ್ಯಾಂಟೆಗ್ಯೂರವರು ಹಿಂದುಸ್ಥಾನ ಸರಕಾರದ ಬಲಿತೆಯನ್ನು ಪ್ರತಿಪ್ಪಿಸಿ ಕ್ಯಾಬಿನೇಟವನ್ನು ಬಿಡಿಗೊತ್ತಿದರು.

———

ಮಹಾತ್ಮರ ಸ್ಥಳದಲ್ಲಿ
ಹಕೀಮ ಅಜಮಲಖಾನರೇನು?

—೦—೦—

ಮಹಾತ್ಮರ ಬಂಧನ ಸಂಬಂಧದಿಂದ ಸೇಠ, ಅಬ್ದುಲ್ ಜಾಫರಿಯವರು ಅಂದಿರುವದೇನಂದರೆ—

ಮಹಾತ್ಮರ ಬಂಧನ ಪೂರ್ವದಲ್ಲಿ ಒಂದೇದಿವಸ ಮೊದಲು ಮಹಾತ್ಮರು ನನ್ನ ಕಡೆಗೆ ಬಂದಿದ್ದರು. ಬಹಳ ಹೊತ್ತಿನವರೆಗೆ ನಮ್ಮಿಬ್ಬರ ಸಂಭಾಷಣೆಗಳಾದವು. ಬಾರಡೋಲಿಯ ಠರಾವಿನ ನನ್ನ ನಿರಾಶೆಯು ದೂರಾಯಿತು. ಅಸಹಕಾರಿತೆಯು ಅಳಿದು ಹೋದಿತೆಂದು ನನಗೆ ತೋರಲಿಲ್ಲ, ಮಹಾತ್ಮರ ಇಚ್ಛೆಯಂತೆ ವರ್ತಿಸಿದರೆ ನಮ್ಮ ಇಚ್ಛೆಗಳು ನಿಶ್ಚಯವಾಗಿ ಸಫಲವಾಗುವವು. ಮಹಾತ್ಮರ ಬಂಧನದಿಂದಲೇ ನನಗೆ ಅವರ ತತ್ವ ವಿಜಯವು ಮನದಟ್ಟಾಯಿತು. ಅವರ ಸನ್ಮಾರ್ಗವಾಗಿಯೇ ನಾನು ದಾಟಿಯನ್ನು ಹಿಡಿದಿದ್ದೇನೆ. ತಮ್ಮ ಬಂಧನಾನಂತರ ಹಕೀಮ ಅಜಮಲಖಾನರನ್ನನುಸರಿಸಬೇಕೆಂದು ಮಹಾತ್ಮರು ಹೇಳಿರುವರು.

ಕರ್ನಾಟಕ ವಡ್ಡೀ ಸಮಾಜ ಸುಧಾರಣೆಯ
೩ನೇ ಜಾಹೀರ ಸಭೆಯು.

—o—

ತಾ|| ೨೮-೩-೩೨ನೇ ... ದಿವಸ ಹುಬ್ಬಳ್ಳಿಯಲ್ಲಿ ಆ ಸಮಾಜದ ಪರವಾಗಿ ಮ|| ರಾ|| ರಾ|| ಗೋವಿಂದಪ್ಪ ತಿಮ್ಮಪ್ಪಾ, ಬೇಸಗಾರ ಎಂಬವರ ... ರೇಲ್ವೆ ಹುಬ್ಬಳ್ಳಿ ಇವರ ಅಧ್ಯಕ್ಷತೆ ಕೆಳಗೆ ಸುಮಾರು ೧೫೦೦ ಜನರು ಕೂಡಿದ್ದರು ಇವರಲ್ಲಿ ವಡ್ಡೀ ಸಮಾಜದ ೮-೧೦ ವಿದ್ವಾಂಸ ಜನರು ಉತ್ತಮ ರೀತಿಯಿಂದ ಭಾಷಣ ಮಾಡಿದರು ಇವರ ನೈತಿಕ ಸಮಾಜ ಸುಧಾರಣೆಯ ಉಪದೇಶಕರಾದ ಮೆ|| ರಾ|| ರಾ|| ಯಲ್ಲಪ್ಪಾ ತಿಮ್ಮಪ್ಪಾ ಆದವಾನಿಕರ (ವಡ್ಡರ) ಕಾರಕೂನ ಇವರು ಹಲವು ವಿಷಯಗಳಲ್ಲಿ ಭಾಷಣ ಮಾಡಿ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದವು.

ಠರಾವುಗಳು

೧ ವಡ್ಡೀ ಸಮಾಜದವರು ಸರಕಾರದವರ ಕೂಡ ಸಹಕಾರಿತೆಯನ್ನು ಬಹಳ ರಾಜನಿಷ್ಠೆಯಿಂದ ನಡೆಯತಕ್ಕದ್ದು.

೨ ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ಕನ್ನಡ, ಮರಾಠಿ ಇಂಗ್ಲೀಷ ವಗೈರೆ ಶಾಳೆಗಳಲ್ಲಿ ಫೀ ಇಲ್ಲದೆ ಕಲಿಯುವದಕ್ಕೆ ಸರಕಾರದವರು ಹುಕುಂ ಮಾಡಿ ಎಲ್ಲಾ ಶಾಳೆಗಳಿಗೆ ಮತ್ತು ಕಲೆಕ್ಟರ ... ಸ್ಕಾಲರಶಿಪ್ಪ ಮಂಜೂರು ಮಾಡಬೇಕು

೩ ಸರಕಾರದವರು ನಮ್ಮ ಸಮಾಜದವರ ಮೇಲೆ ಫೌಜದಾರಿ ಗುನ್ಹೆಗಾರರೆಂದು ನಡಿಸಿಕೊಳ್ಳುತ್ತಾರೆ. ಸದ್ಯಕ್ಕೆ ಕೆಲವು ಕಡೆಯಲ್ಲಿ ಆಗು ಇದ್ದದ್ದನ್ನು ನಿಕಲ ಬಂದ ಮಾಡಿ ಬೇರೆ ಜಾತಿಯವರಿಗೆ ಇದ್ದಂತೆ ಅಪರಾಧಿಗಳನ್ನಷ್ಟೆ ಶಾಸನ ಮಾಡತಕ್ಕದ್ದು;

೪ ವಡ್ಡೀ ಸಮಾಜದವರು ತಮ್ಮ ಗುತ್ತಿಗೆಯ ... ಕೆಳವಿಸ ಮಾರ್ಗ ಕಂಡರೆ ತಂದೆ, ತಾಯಿ, ಮಕ್ಕಳು ಎಂಬ ಎಂಥಾ ಪ್ರೀತಿಯ ಬಂಧುಗಳಿದ್ದರೂ ಅವರನ್ನು ಜಾತಿಯಿಂದ ಬಹಿಷ್ಕಾರ ಹಾಕಿ ಪೋಲೀಸರ ವಶಕ್ಕೆ ಕೊಡತಕ್ಕದ್ದು.

೫ ವಡ್ಡೀ ಸಮಾಜದ ಸ್ತ್ರೀಯರಿಗೆ ಕುಬ್ಬಸಗಳನ್ನು ತೊಡಿಸಿ ಸುಧಾರಿಸಿದ ಆಚಾರ ವಿಚಾರಗಳಿಂದ ತಾವು ಇಟ್ಟುಕೊಂಡ "ಶಿವ ಸಿದ್ಧರಾಯ ಮತ"ವೆಂದು ಮಾನವಾಚಕ ಹೆಸರಿನಿಂದ ಜಾತಿಯನ್ನು ತೋರಿಸಲಿಕ್ಕೆ ಗವರ್ನಮೆಂಟಿನವರು ಮಂಜೂರಿಯನ್ನು ಕೊಡಬೇಕು.

೬ ಕರ್ನಾಟಕ ವಡ್ಡೀ ಸಮಾಜ ಸಹಕಾರಿ ಭದ್ರವಾದ ಸಂಘವನ್ನು ಹುಬ್ಬಳ್ಳಿಯಲ್ಲಿ ಸ್ಥಾಪನಮಾಡಿ ಅದಕ್ಕೆ ತಕ್ಕ ವ್ಯವಸ್ಥಾಪಕರನ್ನು ನೇಮಿಸಿ ಮ|| ರಾ|| ರಾ|| ಪಾಂಡಪ್ಪಾ ಭರಮಪ್ಪಾ ಹುಣಕಲ್ಲನವರ (ವಡ್ಡರ) ಇವರನ್ನು ಸೆಕ್ರೆಟರಿಯನ್ನಾಗಿ ಆರಿಸತಕ್ಕದ್ದು

೭ ಸದರು ಸಂಘಕ್ಕೆ ಗವರ್ನಮೆಂಟ ನೌಕರಿದಾರರಾದ ಮ|| ರಾ|| ರಾ|| ಯಲ್ಲಪ್ಪಾ ತಿಮ್ಮಪ್ಪಾ (ವಡ್ಡರ) ಕಾರಕೂನ, ಮಾಮಲೇದಾರ ಕಚೇರಿ ಹಿರೇಕೆರೂರ ಇವರನ್ನು ಪ್ರೆಸಿಡೆಂಟರನ್ನಾಗಿ ಆರಿಸಲಿಕ್ಕೆ ಸರಕಾರದ ಮಂಜೂರಿ ಇರಬೇಕು.

೮ ನಮ್ಮ ಹಿಂದುಳಿದ ಜನರ ಪೂರ್ಣ ಪರೀಕ್ಷೆಯ ಸರ್ಟಿಫಿಕೇಟು ನೋಡದೆ ಅವರ ತಕ್ಕ ನೌಕರಿಯನ್ನು ಸರಕಾರದವರು ಕಾಯಂ ಮಾಡಿ ಕೊಡತಕ್ಕದ್ದು.

೯ ವಡ್ಡೀ ಸಮಾಜದವರು ಸಂಘದ ನೇಮಗಳಂತೆ ನಡೆಯುವದಕ್ಕೆ ಕರಾರು ಪತ್ರ ಬರೆದುಕೊಡತಕ್ಕದ್ದು. ಕರಾರು ಮೀರಿದರೆ ದಂಡ ಮಾಡತಕ್ಕದ್ದು.

ಶಿವಕಾಶಿಯ ಬೆಂಕಿ; ೬ ಲಕ್ಷದ ಹಾನಿ.

—o—

ಶಿವಕಾಶಿಯಲ್ಲಿ ೧೯ನೇ ತಾರೀಖಿನ ಸಾಯಂಕಾಲಕ್ಕೆ ಒಂದು ಕಟ್ಟಿಗೆಯ ಅಡ್ಡೆಗೆ ಬೆಂಕಿ ಹತ್ತಿತು. ಉರಿಯು ಕಂಡ ನಂತರ ಸೂಚನೆ ಕೊಡಲ್ಪಟ್ಟಿತು. ಅರ್ಧ ಮೈಲಿನ ಮೇಲಿರುವ ನೀರನ್ನು ಇಂಜನ ಸಹಾಯದಿಂದ ತಂದು ಉರಿಯನ್ನು ಆರಿಸಬೇಕಾಯಿತು. ವಾಯು ದೇವನು ಅಗ್ನಿನಾರಾಯಣನಿಗೆ ಪ್ರತಿಕೂಲನಿದ್ದನು. ಬೆಂಕೀ ಸುತ್ತಲಿನ ಉಪಮಾಂತಿಗಳು ಉಳಿದವು ಅವರೂ ೩ ಲಕ್ಷದ ಹಾನಿಯಾಯಿತು.

ತ್ರಿಚನಾಪಲ್ಲಿಯ ತುರಂಗದೊಳ
ರಾಜಕೀಯಕೈದಿಗಳೂ.

—o—

ಜನಾಬ ಯಾಕೂಬ ಹುಸೇನರ ಪ್ರಕೃತಿಯು ಸರಿಯಾಗಿಲ್ಲ. ... ಪೌಂಡು ಇಳಿದದೆ.

ಡಾ. ವರದರಾಜುಲೂ ನಾಯುಡೂರವರ ಪ್ರಕೃತಿಯು ಸರಿಯದೆ. ಆದರೂ ೧೪ ಪೌಂಡು ತೂಕವು ಇಳಿದದೆ.

ಶ್ರೀ ರಾಮನಾಥ ನವಿಲೆ ಎಮ್. ಎ. ಎಮ್. ಎಲ್ ಇವರಿಗೆ ಉಳಿದ ಅಸಹನಾದಿ ಕೈದಿಗಳಂತೆ ಕಲ್ಲು ಒಡೆಯಲಿಕ್ಕೆ ಹಚ್ಚಿರುವರು. ಶ್ರೀ ಕೆ. ಕೆ. ಸಂತಾನಮ್ ಎಮ್. ಎ. ಎಮ್. ಎಲ್. ರವರಿಗೆ ಹೊಲಿಗೆಯ ಕೆಲಸವದೆ.

ಮೊ. ಅಬ್ದುಲ ಮಜೀದಶರಾರವರಿಗೆ ಜ್ವರ ಬರುತ್ತಿದೆ. ಅವರಿಂತೋಪದ್ರವವಾಗಿದೆ. ಅಸ್ತಿಪಂಜರವೊಂದು ಉಳಿದದೆ,

ದರವಡೇಖೋರ ಹಾಗೂ ರಾಜಕೀಯ ಕೈದಿಗಳಲ್ಲಿ ಏನೂ ವ್ಯತ್ಯಾಸವಿಲ್ಲ.

ಈ ಸಂಗತಿಯನ್ನು ಶ್ರೀ. ಅಬದುಲ್ ಕಾದರರೆಂಬವರು ತ್ರಿಚನಾಪಲ್ಲಿಯ ತುರಂಗದಿಂದ ಬಿಡುಗಡೆಯಾದವರು ಹೇಳಿದರೆಂದು ಶ್ರೀ. ರಾಘವನಾರವರು ಹಿಂದೂ ಪತ್ರಕ್ಕೆ ತಿಳಿಸಿದ್ದಾರೆ.

ಮುಂಬೈ ಕೌನ್ಸಿಲಿನಲ್ಲಿ ರಾಜಕೀಯ
ಕೈದಿಗಳ ವಿಷಯವಾಗಿ ಪ್ರಶ್ನೋತ್ತರಗಳು.

—o—

ಪ್ರ. ಮಿ. ನರ್ಮೆ- ಸಾಧಾರಣ ಕೈದಿಗಳಲ್ಲಿಯೂ, ರಾಜಕೀಯ ಕೈದಿಗಳಲ್ಲಿಯೂ ಭೇದವೇನು?

ಉ. ನಾ. ಹೋಮರ್ಸ- ಕ್ರಿಮಿನಲ್ ಕೈದಿಗಳಲ್ಲಿಯೂ, ಅಪರಾಧಿಗಳಲ್ಲಿಯೂ ಏನೂ ಭೇದವಿಲ್ಲ,

ಪ್ರ. ಮಿ. ನರ್ಮೆ- ಈ ಪ್ರಾಂತದಲ್ಲಿ ಹಿಂದೀ-ಯುರೋಪಿಯನ್ ಕೈದಿಗಳನ್ನು ಹೇಗೆ ಹೇಗೆ ನಡೆಯಿಸಿಕೊಳ್ಳುವದನ್ನು ಸರಕಾರವು ಹೇಳಬಹುದೇ? ಕೆಲಸ, ವಿಶ್ರಾಂತಿ, ಅರಿವೆ-ಅಂಚಡಿ, ಸ್ವಸ್ಥತೆಗಳ ವಿಷಯವಾಗಿ

ಉ. ನಾ. ಹೋಮರ್ಸ- ಹಿಂದೀ- ಯುರೋಪಿಯನ್ನರಿಗೂ ತುರಂಗ ಕಾಯಿದೆಯು ಒಂದೇ ಯುರೋಪಿಯನ್. ಹಾಗೂ ಹಿಂದೀಜನರಿಗೆ ಇರಲು ಬೇರೆ ಬೇರೆ ಸ್ಥಳವಿದೆ. ಕೆಲಸ, ಅರಿವೆ ಅಂಚಡಿಗಳು ಅವರವರಿಗೆ ತಕ್ಕಂತೆ ಕೊಡಲ್ಪಟ್ಟಿವೆ. ಧರ್ಮದ ತಕ್ಕ ನಡೆಯಲು ಅನುಕೂಲಗಳಿವೆ.

ಮ್ಯಾಂಚೆಸ್ಟರದ ಒಂದು ಗಿರಣಿಯು
ದಿವಾಳೇ ಹೊರಟಿತು.

—o—

ಮ್ಯಾಂಚೇಸ್ಟರದ ಅಲೇಗ್ಸಾಂಡ್ರಿಯಾ ಎಂಬದೊಂದು ಗಿರಣಿಯು ದಿವಾಳೇ ತೆಗೆಯಿತು. ೬ ಲಕ್ಷ ಪೌಂಡಿನ ಹಾನಿಯಾಗಿದೆಯಂತೆ ಪರದೇಶೀ ಅರಿವೆಯ ಬಹಿಷ್ಕಾರ ಘಾತಕವೇ ಇದಕ್ಕೆ ಇರಬಹುದು,

---

ಮಹಾತ್ಮರ ಜಿಟ್ಲೆಯಲ್ಲಿರತಕ್ಕ ಅನೇಸರ ಹೆಸರುಗಳು.

——— ೦ ———

ಮಹಾತ್ಮರ ಜಿಟ್ಲೆಯು ಸಾರ್ವಜನಿಕ ಸ್ಥಳದಲ್ಲಿ ಸಹದಾಗಿ, ಸ್ಥಳದ ಅಭಾವದ ಮೂಲಕ ೧೦೦ ಜೇಲಿಗಳಿಗೇ ಕೊಡಲ್ಪಡುವವು. ಮಿ. ಭೂಪು ಫೀಲ್ಡರು ಮತ್ತು ಅನೇಸರಿಗೆ ನೋಟೀಸು ತೆಗೆದು ಅವರಲ್ಲಿ ಹಿಂದ ೭ದವರೆಗೆ ಜಿಟ್ಲೆಯಲ್ಲಿರುವರು. ಆ ನೇಸರ ಹೆಸರುಗಳು ೧ ಅರದೇಶ ದಾದಾಭಾಯಿ ೨ ಕೇಶವಲಾಲ ಬಳವಂತರಾವ ೩ ಮಗನಲಾಲ ಮೂಸೀರಾಮ, ೪ ಹಿರಾಲಾಲ ಫೋಜಾರಾಮ, ೫ ದಾ ಹ್ಯಾಭಾಯಿ ನಾನೇಸಿದಾಸ, ೬ ಬಾಬ್ಯಾ ನು ಮೋತೀರಾಮ, ೭ ಮಾಧವಲಾಲ ಕೃಷ್ಣರಾವು, ೮ ದಾಸಜಿ ಪ್ರೇಮಸಿಂಗ, ೯ ಪ್ರೀತಮರಾಮ ಮಬ್ರಾಮ, ೧೦ ರಾಮೇಶ್ವರ ಸೀತಾಫರಾಶ್ತ್ರಿ

ಮಹಾತ್ಮರ ... ರ ಸುದ್ದಿಗಳು.

ಮಹಾತ್ಮರು ... ಕೆಯ ಭಾಗವನ್ನೇ ನೂ ಕಳೆದುಕೊಳ್ಳದೆ ಜೇಲಿನ ದಿನಮಾನನ್ನು ಪವಿತ್ರ ಕೋಟೆಗೆ ಒಪ್ಪಿಸುವರು. ಮಹಾತ್ಮರ ಜೇಟ್ಟಿಗಾಗಿ ಸಂಧ್ಯಾಕಾಲದಲ್ಲಿ ೩ ಎಂದ ೪ ರವರೆಗೆ ವೇಳೆಯು ಗೊತ್ತಾಗಿದೆ. ಸ್ತ್ರೀಯರು, ... ಗರು, ಮುಂದಾಳುಗಳು ಎಲ್ಲರೂ ಗ ... ಗಿ ಹೋಗುವರು. ... ಲ್ಲರಿಗೂ ನಗು ... ಇಷ್ಟನೆಯಿಲ್ಲೆಯು ನೆತು. ಮುಂದಾ ... ಭಾಷಣ ನಡೆದ ಪ್ರಸಂಗದಲ್ಲಿ ಒಬ್ಬೊಬ್ಬ ... ಸುಯಿಂದಲೂ ನಡ ನಗುವರು. ಅಧಿಕಾರಿ ... ರು ಆನಂದದಿಂದಲೇ ಒರುವರು ಸಂ. ಮಾಲವೀಯ, ಶ್ರೀ, ... ಭಾಯಿ ಪಟೇಲ, ನೆಹರೂ, ಮೌಲಾನಾ ಅಬುಲಕಲಾಮ ಆಜಾದ, ಪಂ. ಜವಾಹಿರಲಾಲರೂ ಜೇಟ್ಟಿಗೆ ಹೋಗಿದ್ದರು.

———

ಮಹಾತ್ಮರ ಬಂಧನದಿಂದ ಒದೆಯು ಇಬ್ಬಾಗವಾಯಿತು.

——— ೦ ———

ಸ್ಟೇಟ್ ... ಸ್ವಾ. ಕೆ. ವ್ಹಿ ರಾಮಸ್ವಾಮಿ ಅಯ್ಯಂಗಾರರು ಮಹಾತ್ಮರ ಬಂಧನ ಸಂಬಂಧದಿಂದ ವಿಲ್ಲಿಯಿಂದ ತಾರು ಮಾಡಿ ತಿಳಿಸಿದ್ದೇನಂದರೆ— ಮಹಾತ್ಮರನ್ನು ಹಿಡಿದದರಿಂದ ನಮ್ಮ ಎದೆಯು ಇಬ್ಬಾಗವಾಗಿ ಹೋಯಿತು. ನಮ್ಮ ದೇಶಬಾಂಧವರಲ್ಲಿಯ ನರಶಾರ್ದೂಲ (ಮನುಷ್ಯರಲ್ಲಿ ಸಿಂಹ) ರ ಮುಕ್ತತೆಗಾಗಿ, ಹಾಗೂ ನಮ್ಮ ಧ್ಯೇಯವನ್ನು ಮುಟ್ಟುವದಕ್ಕಾಗಿ ಪ್ರಯತ್ನ ಮಾಡುವದು ನಮ್ಮ ಕರ್ತವ್ಯವು. ಮಹಾತ್ಮರ ಬಂಧನದಿಂದವ ನಾಳರನ್ನೂ ನಮ್ಮಲ್ಲಿ ಕೂಡಿಸಿಕೊಳ್ಳಬಹುದು. ಮಹಾತ್ಮರ ಇಚ್ಛೆಯಂತೇ ಒಂದೇ ಬಹಿಷ್ಕಾರ ವ್ರತವನ್ನು ಪಾಲಿಸಿದರೂ ನಮ್ಮ ಇಚ್ಛೆಯು ಸಫಲವಾಗುವದು.

———

ಮಹಾತ್ಮರ ಶಿಕ್ಷೆಯ ಸಂಬಂಧದ ಹಾರುಸುದ್ದಿ.

—— ೦ ——

ಆಗಲೇ, ಶನಿವಾರನೇ. ೧೮ ನೇ ತಾರೀಖಿಗೇ ಶಿಕ್ಷೆಯಾಯಿತೆಂತಲೂ, ಶಿಕ್ಷೆಯು ಸಾದಾ ಇಗಿರುವದೆಂತಲೂ ಊರೆಲ್ಲೆಲ್ಲ ವರ್ತಮಾನವು ಹಬ್ಬಿದೆ. ಈ ದರೂ ಸಿದ್ಧಯವಾಗಿತೀರಿಲ್ಲ. (ಆನೇ ವಾನ ನೋಡಿರಿ)

....

ಪಂ. ಮೋತೀಲಾಲರು.

ಆನಂದಭುವನ ಹೋದರೂ ದಂಡದ ಹಣ ಕೊಡೆನು.

....೦ ...

ಪಂ. ಮೋತೀಲಾಲರ ... ರೂ. ಗಳ ದಂಡದ ವಸೂಲಿಗಾಗಿ ಅವರ ೫೦೦೦ ಸಾವಿರದ ಬೆಲೆಯ ಮೋಟಾರು ಒಪ್ಪಾಗಿರುವದಷ್ಟೇ? ಪಂ. ಕೃಷ್ಣಲಾಲರಗೂಡ ಪಂ, ಮೋತೀಲಾಲರು ಹೇಳಿ ಕಳಿಸಿರುವದೇನಂದರೆ—

ಜಪ್ತ ಮಾಡಿ ಒಯ್ದ ಮೋಟಾರಗಾಡಿಯು ನನ್ನದು. ಅದನ್ನು ಮಾರಿ ದಂಡದ ಹಣವನ್ನು ವಸೂಲು ಮಾಡಿಕೊಳ್ಳಬಹುದು. ದಂಡದ ಹಣದ ವಸೂಲಿಗಾಗಿ ಪೋಲೀಸರು ನನ್ನ ಆನಂದಭುವನ ಮಂದಿರವನ್ನು ಮಾರಲಿಕ್ಕೆ ಹಚ್ಚಿದರೂ ಅದಕ್ಕೆ ನಾನು ಅಡ್ಡಬರುವವನಲ್ಲ. ಸ್ವಸಂತೋಷದಿಂದ ದಂಡದ ಹಣವನ್ನು ಕೊಡುವೆನೆಂಬ ಕಲ್ಪನೆಯನ್ನು ಮನಸಿನಲ್ಲಿಸಬಾರದೇನಿರಿ.

———

ಅಮೂಲ್ಯ ಸಂಧಿ!

ಆತಂಕನಿಗ್ರಹ ಮಾತ್ರೆಗಳು.

ಅತ್ಯುತ್ತಮ ಸಂಧಿ!

ಅಜೀರ್ಣವನ್ನು ಹೋಗಲಾಡಿಸಿ, ಶುಭ್ರವಾದ ರಕ್ತವನ್ನುಂಟು ಮಾಡಿಸಿ ದೇಹವನ್ನೂ, ಬುದ್ಧಿ ಇತ್ಯಾದಿಗಳನ್ನೂ, ಅಭಿವೃದ್ಧಿ ಪಡಿಸುವದಲ್ಲದೆ, ಸಾವಿರಾರು ಜನರು ಅನುಕೂಲ ಗುಣಗಳನ್ನು ಹೊಂದಿರುವರು. ಒಂದು ರೂಪಾಯಿ ಕೊಟ್ಟು ಈ ಎಲ್ಲ ಅನುಭವಗಳನ್ನು ಪಡೆಯಬಹುದು ಇದಲ್ಲದೆ ಓ ನ್ಯ ಇತರ ಅಂದರೆ ಸಕಲವಾದ ಔಷಧಿಗಳ ತಿಳಿಸುವದಕ್ಕಾಗಿ ಈ ಕೆಳಗಿನ ಅಡ್ರೇಸಿಗೆ ಬರಿಯುವಲ್ಲಿ ತಿಳಿಸುವೆವು.

ನಮ್ಮ ವಿಳಾಸ—

ಆತಂಕನಿಗ್ರಹ ಔಷಧಾಲಯ

೬೬ ಥಂಬ್ರಚೆಟ್ಟಿ ಮದರಾಸು.

ವಕೀಲ ಹಾಗೂ ಪಕ್ಷಗಾರರಿಗೆ

ಉಪಯುಕ್ತ

ದರಖಾಸ್ತ ಫಾರ್ಮ, ವಕೀಲ ಪತ್ರ

ಎಂಡಾರ್ಸಮೆಂಟ ಪತ್ರಿಕೆಗಳು

ಯೋಗ್ಯದರದಿಂದ ನಮ್ಮಲ್ಲಿದೊರೆಯುವವು.

“ ಕ್ಷ ” ಮ್ಯಾನೇಜರ ವಿಜಯ ಧಾರವಾಡ

———

ನೋಟಿಸಿನದರಗಳು.

——೦——೦——

೫೦ ಲೈನಿನ ಒಳಗಿನ ಎಂಟು ವೇಳೆಗಳಿಗೆ ಒಂದೇ ಕಾಲಕ್ಕೆ ರೂ ... ಇ; ... ನೆ ಪತಿಯೊಂದು ವೇಳೆಗೆ ಎರಡು ಆಣೆ; ಇಂಗ್ಲಿಷ ಕಟ್ಟಿಯೊಂದು ವೇಳೆಗೆ ಆರು ಆಣೆ ಇಂಗಿಷದಿಂದ ಅ ... ಕನ್ನಡದಲ್ಲಿ ಹಾಕುವದಿದ್ದರೆ ಏಳು ಆಣೆ. ಜಬ ... ಕಾಲದ ಒಳಗಳಿಗೆ ನಮ್ಮ ದರ ... ರಾತುಗಳನ್ನು ಕೊಡುವವರು ಕೆಳಗಿನವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು ಮ್ಯಾ. ವಿ. ಧಾರವಾಡ.

———

ವಿಜಯದ ವರ್ಗಣೀದರ.

——೦——

ನಿತ್ಯಪತ್ರಕ್ಕೆ	೧೨	ತಿಂಗಳಿಗೆ	೧೨-೮-೦ ರೂ.
”	೬	”	೭-೦-೦ ರೂ.
”	೩	”	೪-೦-೦ ರೂ.
”	೧	”	೧-೮-೦ ರೂ.

ವಾರಪತ್ರಕ್ಕೆ ವಾರ್ಷಿಕ ವರ್ಗಣಿ ೩-೧೨-೦ ರೂ.

ವಿಶೇಷಮಾಹಿತಿಗಳಿಗೆ ವಿಳಾಸಕ್ಕೆ.

ಮ್ಯಾ. ವಿಜಯ

[illegible]
ಧಾ. [illegible] ವಿಷಯಗಳವು.

ಪ್ರತಿ[illegible]ಸುವ:

ಕರ್ನಾಟಕ ಸಿಂಹ.

[illegible] ಕನ್ನಡ ವಾರ ಪತ್ರಿಕೆಯು.

ವರ್ಷಕ್ಕೆ [illegible] | ಪರ್ಷ್ಕರವರಿ
ರೂ. [illegible] | ರೂ. [illegible]

ಈ ಪತ್ರನಿಂದ ಮೂರು ತಿಂಗಳ ಒಳಹೊರಗೆ ಹೊರಡುವದು. ನೀತಿ ವಿನಂಸಿದ ವಾರಪತ್ರಿಕೆಯು [illegible]ದಿಂದ ಭಾಷಾ ಸೇವೆಯನ್ನು ಮಾಡುತ್ತಿದ್ದು ಮತ್ತು ಮೈಸೂರ ಯಾಗೂಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ [illegible] ನಾಮಗಳನ್ನು ಪಡೆದ ವಿ॥ [illegible] ಹುಯಿಲಗೋಳ ಇವರ ಸಂಪಾದಕತ್ವದ ಕೆಳಗೆ ಹೊರಡುವದಲ್ಲದೆ ಆಬಾಲವೃದ್ಧರಿಗೆ ತಿಳಿಯುವಂಥ ತಿಳಿಗನ್ನಡದಲ್ಲಿ [illegible] ಷಯಲ್ಲಿ ಬರೆದ ಲೇಖನಗಳನ್ನು ಅದರಲ್ಲಿ ಕೊಡುವೆವು. ಗ್ರಾಹಕರು ತಮ್ಮ ಸಂಪೂರ್ಣ ಹೆಸರನ್ನು [illegible] ಬರೆದು ತಿಳಿಸಬೇಕಾಗಿ, ಸವಿನಯ ವಿನಂತಿ ಇರುತ್ತದೆ.

ವಿಳಾಸ:— ಶಾಂತಪ್ಪಾ ಸಿಮೋನೆಪ್ಪಾ [illegible]
[illegible] ಪೋಲಿಸ್ ಸ್ಟೇಷನ್ [illegible] ಗದಗ ಜಿ. ಧಾರವಾಡ

* * * * *

ಜೋ. ಪೀ. ರಾವ್.

ಹೊಸ ಪುಸ್ತಕಗಳು! ಹೊಸ ಪುಸ್ತಕಗಳು

ಮಿ॥ ನಿಂಬಾಳಕರ ಇವರಿಂದ ರಚಿತವಾದ [illegible] ನವ ಐತಿಹಾಸಿಕ ಅಟ್ಲಾಸ ಇದು ಕನ್ನಡ [illegible]ನೇ ಇಯತ್ತೆಗಳಿಗೂ ೧ ನೇ ೨ ನೇ ೩ ನೇ ವರ್ಷದ ಟ್ರೇನಿಂಗ್ ಕಾಲೇಜಿನ ಕ್ಲಾಸುಗಳಿಗೂ ಟೆಕ್ಸ್ಟಬುಕ್ಕಾಗಿ ಮಂಜೂರಾಗಿರುತ್ತದೆ. ಇತಿಹಾಸ ಕಲಿಯುವ ಪ್ರತಿಯೊಬ್ಬನು ಅವಶ್ಯವಾಗಿ ಸಂಗ್ರಹಿಸತಕ್ಕ ಪುಸ್ತವು [illegible] ಮುಂಬಯಿ ಇಲಾಖೆಯ ಭೂಗೋಲ ಇದು ಹೊಸ ನಮೂನೆಯಿಂದ ಬರೆಯಲ್ಪಟ್ಟ ಮೊದಲನೇ ಪುಸ್ತಕವೆಂದು ಅನೇಕ ವಿದ್ವಾಂಸರ ಅಭಿಪ್ರಾಯಗಳಿರುತ್ತವೆ. ನಾಲ್ಕನೇ ಇಯತ್ತೆಗೆ ಟೆಕ್ಸ್ಟ ಬುಕ್ಕಾಗಿ ಮಂಜೂರಾಗಿರುತ್ತದೆ ಪ್ರತಿಯೊಬ್ಬ ಬಡ ವಿದ್ಯಾರ್ಥಿಗೂ ಪುಸ್ತಕವು [illegible] ಇದ್ದುದರಿಂದ [illegible] ಬಹಳ [illegible]
[illegible] ಮೂಲಶಿಕ್ಷಕ [illegible] ಇರುವ [illegible] ೧ ನೇ ಇಯತ್ತೆಯ ವಿದ್ಯಾರ್ಥಿಗಳಿಗೆ ಉತ್ತೇಜಕ ಸಹಾಯಕ ಪುಸ್ತಕವು [illegible] ಮನೋಹರವಾದ ಅನೇಕ ಚಿತ್ರಗಳಿರುವ [illegible] ೦-೨-೦ ಧಾರವಾಡ ಜಿಲ್ಲೆಯ ಭೂಗೋಲ ನಕಾಶೆ ಚಿತ್ರಗಳುಳ್ಳದ್ದು [illegible] ಹುಬ್ಬಳ್ಳಿ, ನವಲಗುಂದ, [illegible], ಗದಗ, ತಾಲೂಕುಗಳ ಭೂಗೋಲಗಳು, [illegible] ೦-೨-೦ ಅಂಕಗಣಿತ ೧ ನೇ ಭಾಗ [illegible] ೦-೫-೦ ಇವಲ್ಲದೆ [illegible] ಎಲ್ಲ [illegible] ದೊರೆಯುತ್ತವೆ. [illegible] ವ್ಯಾಪಾರಿಗಳಿಗೂ, ವಿದ್ಯಾರ್ಥಿಗಳಿಗೆ, [illegible] ಕೊಡಲಾಗುವದು.

[illegible] ನಿಂಬಾಳಕರ [illegible]
[illegible]

ಅಪೂರ್ವ ಅಲಭ್ಯ ಪ್ರೇಕ್ಷಣೀಯ

ಫಡಕೆ ಇವರ ಚಿತ್ರಕಲಾ ಪ್ರದರ್ಶನ

ಮುಂಬಯಿ, ಮೈಸೂರ, ಮದ್ರಾಸ, ಬೆಳಗಾವಿ, ದಾವಣಗೆರೆ ಪ್ರದರ್ಶನದಲ್ಲಿ [illegible] ಪದಕಗಳನ್ನು ದೊರಕಿಸಿದಂಥ ಒಂದ ಸಾವಿರದ [illegible] ಪ್ರಸಿದ್ಧ ಚಿತ್ರಕಾರರಾದ ಶ್ರೀ ಫಡಕೆ [illegible] ತಯಾರಿಸಿದ [illegible] ಹಾಗೂ [illegible] ಚಿತ್ರಗಳ ಶಿಲ್ಪಕಲೆಯು ಅತ್ಯಂತ ಮನೋಹರವಾಗಿ [illegible] ಪ್ರದರ್ಶನವು.

ಕೇವಲ ಜನರ ಆಗ್ರಹದ ಸಲುವಾಗಿ ಈ ಪ್ರದರ್ಶನವನ್ನು ಹುಬ್ಬಳ್ಳಿಯ ದುರ್ಗದ ಬೈಲಿನಲ್ಲಿ ಮಿ॥ ಮಹೀಂದ್ರಕರ ಫೋಟೋಗ್ರಾಫರ [illegible] ಇಡಲಾಗಿದೆ.

ಇದರಲ್ಲಿ ಕೈಲಾಸವಾಸಿ ಲೋಕಮಾನ್ಯ ಟಿಳಕ ಮತ್ತು ಮಹಾತ್ಮಾ ಗಾಂಧಿ ಮುಂದಾಳುಗಳ [illegible] ಚಿತ್ರಗಳು [illegible] ದೇವತೆಗಳ ಮೂರ್ತಿಗಳನ್ನು ಪ್ರದರ್ಶನದಲ್ಲಿ ಇಡುವದಕ್ಕೆ ಬಂದಿದೆ.

ಆದ್ದರಿಂದ ಇಲ್ಲಿಯ ರಸಿಕ ಹಾಗು [illegible] ನಾಗರಿಕರು ಈ ಅಪೂರ್ವ ಸಂಧಿಯ ಲಾಭ ಮಾಡಿಕೊಳ್ಳುವರೆಂಬ ನಂಬಿಗೆಯದೆ.

ದುರ್ಗದಬೈಲ [illegible] ಹುಬ್ಬಳ್ಳಿ | ಮ್ಯಾನೇಜರ
[illegible] | ಫಡಕೆ ಚಿತ್ರಕಲಾ ಪ್ರದರ್ಶನ

ಓದಿರಿ! ಓದಿರಿ!! ಓದಿ[illegible]

ಅದ್ಭುತಮಹಿಮೆ! **ನಭೂತೋನಭವಿಷ್ಯತಿ** ಅದ್ಭುತಮಹಿಮೆ!

ಶಾಪಮುಕ್ತರಾಗಿರಿ. ಸುಖಿಗಳಾಗಿರಿ.

[illegible] | ಶ್ರೀ [illegible] | [illegible]

ಶ್ರೀ ಸ್ವಪ್ನಸಿದ್ಧ ಚರಿತ್ರೆಯು.

ಈ ಮಹಾಮಹಿಮರು [illegible] ೧೦ ತಿಂಗಳೊಳಗಾಗಿಯೇ ಇವರ ಮಹಿಮೆಯು [illegible] ವ್ಯಾಪಿಸಿರುವದು. ಹುಬ್ಬಳ್ಳಿ ತಾಲೂಕು [illegible] ಗ್ರಾಮದಲ್ಲಿ ಇವರ ಸಮಾಧಿ [illegible] ಇಂಥ [illegible] ಮುಂತಾದ [illegible] ಜನರಿಗೆಲ್ಲ ಸಾರಿ ಹೇಳಿದ್ದಾರೆ.

ಪ್ರತಿ [illegible] ಗುರುವಾರಗಳಲ್ಲಿ ಅಗಣಿತ ಜನ ಸಮುದಾಯವು [illegible] ದರ್ಶನಕ್ಕೆ [illegible] ಹೋಗುವದು. ಭಕ್ತಜನರು [illegible] ಸಮಾಧಿಯ ಮುಂದಿಟ್ಟ [illegible] ಸಾವಿರ ರೂಪಾಯಿಗಳವರೆಗೆ [illegible] ಪತ್ರಗಳು [illegible] ನಡೆಸಿಕೊಳ್ಳುತ್ತಿರುವವು.

ಇಂಥ [illegible] ಸರ್ವತ್ರ ಪ್ರಸಿದ್ಧವಾಗಿ ಎಲ್ಲರಿಗೂ [illegible] ಸದ್ಭಾವನೆಯಿಂದ ನಾವು ಇವರ ಚರಿತ್ರೆಯನ್ನು ಅನೇಕ [illegible] ಸಂಗ್ರಹಿಸಿ [illegible] ವನ್ನು ಕೊಟ್ಟು ಪ್ರಸಿದ್ಧಿಸಿದೆವು. [illegible] ಇಟ್ಟಿರುವೆವು. [illegible]

ಎಲ್ಲ ಕನ್ನಡಿಗರು ಈ ಪುಸ್ತಕವನ್ನು ಖರೀದಿಸಿಕೊಂಡು ತಮ್ಮ [illegible] ಮಾಡಿಕೊಂಡರೆ ನಮ್ಮ ಶ್ರಮದ ಸಾರ್ಥಕ್ಯವಾಯಿತೆಂದು ತಿಳಿಯುವೆವು.

ಇವರ ಚರಿತ್ರವನ್ನು ಅನೇಕ ಜನರು ಬರೆದಿರುವರು. [illegible] ಈ ಪುಸ್ತಕವು [illegible] ಕುರುಡರು, ಕುಂಟರು, ಮಕ್ಕಳಿಲ್ಲದವರು, [illegible] ಮಾತ್ರ ಈ ಸಮಾಧಿಗೆ ನಡೆದುಕೊಂಡರೆ ಸಾಕು, ಅವರ [illegible] ತಮ್ಮ ಅಭೀಷ್ಟವನ್ನು ಪ್ರಾಪ್ತಿ ಮಾಡಿಕೊಳ್ಳುವರು. ಅಂತು ಲಾಭಮಾಡಿಕೊಂಡವರ ಉದಾಹರಣಗಳು ಲಕ್ಷಾಂತರ ಇರುವವು.

ಈ ಚರಿತ್ರೆಯಲ್ಲದೆ ನಮ್ಮಲ್ಲಿ ಎಲ್ಲ ತರದ ಕಥೆ ಕಾದಂಬರಿಗಳೂ, [illegible] ಪುಸ್ತಕಗಳೂ, [illegible] ಪುಸ್ತಕಗಳೂ, [illegible] ಸಿಗುವವು. [illegible] ಎಲ್ಲ ಪುಸ್ತಕಗಳೂ ಸಿಗುವವು.

ಎ. ಆರ್. ಶಿವನಾಗಪ್ಪಾ ವಾಗ್ಗಿಲಾಕ.
ಹುಬ್ಬಳ್ಳಿ.

ಈ ಪತ್ರವನ್ನು [illegible] ಇವರು ಧಾರವಾಡದಲ್ಲಿ ತಮ್ಮ [illegible]

ನಿತ್ಯ ಪತ್ರ

ಬೆಲೆ ೬ ಪೈ

(೧೯೩೦)

ವರ್ಷ ೩) ಧಾರವಾಡ, ಬುಧವಾರ ತಾ೦|| ೨೩ ನೇ ಸಪ್ಟೆಂಬರ ೧೯೨೨. (ಸಂಚಿಕೆ ೬೫

ಸ್ಟೇಟ ಸೆಕ್ರೆಟರಿಗಳ ರಾಜೀನಾಮೆಯಿಂದ
ರಾಜೀನಾಮೆಗಳ ಸುಗ್ಗಿ ಬಳುವದೇನು!

—o(.)(o)(:)o—

ಹಿಂದುಸ್ತಾನದ ಸ್ಟೇಟಸೆಕ್ರೆಟರಿಗಳಾದ ಮಿ ಮಾಂಟೆಗ್ಯೂ ರವರಂತೂ ರಾಜೀನಾಮೆಯನ್ನಿತ್ತರು ನಾವು ನೋಡ್ಡೆ "ಗೂಳಿಬಿದ್ದರೆ ಆಳಿಗೊಂದು ಕಲ್ಲು" ಎಂದು ಬರೆದಂತೆ ಮಿ. ಮಾಂಟೆಗ್ಯೂ ಸಾಹೇಬರ ರ ಹೆಸರಿನಿಂದ ಹಲವರು ಹಲವು ತರಹದ ಕಲ್ಲು ಕ ಚೆಯುತ್ತಿರುವರು. ಯಾರು ರಾಜೀನಾಮೆಯ ಯೋಗ್ಯರೆಂದರೆ, ಯಾರು ಅಯೋಗ್ಯರೆನ್ನುವರು. ತ ಮು ತಮ್ಮ [illegible]. ತಮ್ಮ ತಮ್ಮ ಧೋರಣಕ್ಕ ನುಸರಿಸಿ, [illegible] ಬೇಕಾಗದವನ್ನಾಗಿ ಮಾಡುತ್ತಿರುವರು. ಯಾರು ಏನು ಮಾಡಿದರೂ ತಿ [illegible] ಆಗಿಹೋದ ಮಾತಂತೂ ತಿರು ಗಿ [illegible]'' ಇವರ ಈ ಟೀಕಾಸ್ತ್ರ ಪ್ರಯೋಗ ವು [illegible] ಸ್ಟೇಟ ಸೆಕ್ರೆಟರಿಗಳಿಗೆ ಮಾತ್ರ ಉಪ ಯೋಗ [illegible]ವೆನ್ನುವುದಕ್ಕೆ ಅಡ್ಡಿಯಿಲ್ಲ. ಅಂತೇ ಸ್ಟೇ ಟ ಸೆಕ್ರೆ[illegible] ಇಬ್ಬರು ಮೂವರು ಸರಕಾರ [illegible]. ಯಾರು ಬರುವರೋ ನೋಡಬೇಕಾ ಗಿದೆ. [illegible].

ಸ್ಟೇಟ ಸೆಕ್ರೆಟರಿಗಳಂತೂ ರಾಜೀನಾಮೆಯನ್ನು ಕೊಟ್ಟರು. ಅವರು ರಾಜೀನಾಮೆಯನ್ನೇಕೆ ಕೊಡ ಬೇಕಾಯಿತೆಂಬುದೂ ಸರ್ವ ವಿಶ್ರುತವಾಗಿ ಹೋಗಿದೆ. ಮೊನ್ನೆ ಪರರಾಷ್ಟ್ರ ಮಂತ್ರಿಗಳಾದ ಲಾರ್ಡ ಕರ್ಝನ ಸಾ|| ರು ಲಾರ್ಡರ ಸಭೆಯಲ್ಲಿ ತಾವು ಮಿ. ಮಾಂ ಟೆಗ್ಯೂ ಸಾಹೇಬರವರಿಗೆ ಬರೆದ ಪತ್ರವನ್ನು ಬಳ್ಳೇ ಆ ಫ್ಯತೆಯಿಂದ ಓದಿ ತೋರಿಸಿದರು. ಅದರ ಮಥಿತಾ ರ್ಥವೆಂದರೆ ಇಂಗ್ಲಂಡದಿಂದ ೬ ಸಾವಿರ ಮೈಲು ದೂ ರವಿರುವ, ಸಾಮ್ರಾಜ್ಯದ ಒಂದು ಭಾಗದ ನೌಕರರಾ ಗಿರುವ ಹಿಂದುಸ್ತಾನದ ಅಧಿಪತಿಗಳು ಪರರಾಷ್ಟ್ರ ಮಂತ್ರಿಗೆ (ಲಾರ್ಡ ಕರ್ಝನರಿಗೆ) ಹೀಗೆ ಹೀಗೆ ಮಾ ಡು ಎಂದು ಹೇಳುವ ಅಧಿಕಾರವಿಲ್ಲವು. [illegible] ದ್ದರೆ ಇತರ ಮುಸಲ್ಮಾನ ರಾಷ್ಟ್ರಗಳ ಸಂಬಂಧದ ಲ್ಲಿಯೂ ಹಿಂದುಸ್ತಾನ ಸರಕಾರವು [illegible]"

ಈ ಲಾರ್ಡ ಕರ್ಝನ್ನರ ವಿಧಾನವನ್ನು ನೋ ಡಲು ಪದನಾ[illegible], ಅದೇಕೆ ಸ್ಪಷ್ಟವಾಗಿ ಲಾ ರ್ಡ ರೀಡಿಂಗರ ಮೇಲೆಯೂ [illegible] ಅಪರಾಧ ಹೊರಿಸುವದು. ಲಾರ್ಡ ರೀಡಿಂಗರಂತೂ ಮುಸಲ್ಮಾ ನ ರಾಷ್ಟ್ರಗಳ ಸಂಬಂಧದಿಂದ [illegible] ವಿಚಾರ ಈಗ ಪ್ರಸಿದ್ಧಿಸಲ್ಪಟ್ಟ ಕಾಗದದಿಂದ ಕಂ ಡುಬರುತ್ತಿದೆ. ಲಾರ್ಡ ರೀಡಿಂಗರ ಮೇಲೆ [illegible] ಮುಸಲ್ಮಾನ [illegible] ಗಳ [illegible] ಲಾರ್ಡ ಕರ್ಝನರ ಪತ್ರದಿಂದ ಲಾರ್ಡ ರೀಡಿಂಗರ ವರ ಧೋರಣಕ್ಕೆ ದಕ್ಕೆ [illegible], ಅವರ ಮೇಲೆಯೂ ಒಂದು ತರದ ಅಪರಾಧವು ಬಂದಿತ್ತು [illegible]. [illegible] ಲಾರ್ಡ ರೀಡಿಂಗ ರವರ [illegible] ಪತ್ರಗಳು ಧವತಿ.ಸಭೆಯನ್ನು [illegible] ಈ ಪ್ರಸಂಗದಲ್ಲಿ ಲಾರ್ಡ ರೀಡಿಂಗರವರೂ ಒಂದು ವೇಳೆ ರಾಜೀನಾಮೆಯನ್ನು ಕೊಡಬಹುದು. ಅಥ ವಾ ಕೊಡುವ ಪ್ರಸಂಗ ಬರಬಹುದು. ಹಾಗಾ ದಲ್ಲಿ ಪರ್ಯಾಯದಿಂದ ಮದ್ರಾಸ, ಮುಂಬಯಿಗಳ ಗ ವ್ಹರ್ನರರೂ ತಮ್ಮ ಕೆಲಸಕ್ಕೆ ರಾಜೀನಾಮೆಯುವ ಮಾತ್ರ ಬರಬಹುದು.

ಹಿಂದುಸ್ತಾನದ ಲೋಕಮತಕ್ಕಾಗಿ ಈ ಬಗೆ ಯ ರಾಜೀನಾಮೆಗಳ ಸುಗ್ಗಿಯಿದ್ದರೆ ಇಂಗ್ಲಂಡದ ಮಂತ್ರಿಮಂಡಳವೂ. ಮೊದಲೇ ಹೊಯ್ದಾಡುತ್ತಿದ್ದ ಮಂತ್ರಿಮಂಡಳವೂ ಬಿಡಬಹುದೆಂದೆನಿಸುವದು. [illegible] ಕ್ರಿ [illegible] ವರಿಂದೇ ಬಹ [illegible] ನ್ನು [illegible]. [illegible] ಗಾರಿಕೆಯಾಗದೇ [illegible]. [illegible] ನದ ಲೋಕಮತದ [illegible] ಕ್ಷಣಗಳು ಕಂಡು ಬರುತ್ತಿವೆ.

[illegible]

[illegible]

[illegible] ದ್ಯ [illegible] ನೆಂದು ನಾವು ತಿಳಿಯುವೆವು.

[illegible]

[illegible] ಮೇ [illegible] ರಕಾರದೊಡನೆ [illegible] ನ್ನು ಮಾಡಿ [illegible]

ಯಾವ ಕ್ಷತ್ರಿಯ [illegible] ರಾಧವೆಂದು [illegible] ನು [illegible] ಯುವನು. ನನಗೆ ಕೊಡತಕ್ಕಷ್ಟು ಕಠಿಣ ಶಿಕ್ಷೆ ಯನ್ನು ಕೊಡಿರಿ. ನಾನು ಆನಂದದಿಂದ [illegible] ನು. ನಾನ [illegible] ನೀವು [illegible] ಯು ದುಷ್ಟ [illegible] ನಿಮ್ಮ [illegible]

[illegible]ರನ್ನೂ, ನಾನ[illegible] [illegible]ವೂ ಆಪಿತ್ತಕಾರವೂ ಇರುವ[illegible] ನಿಮ್ಮ ಕಲ್ಪನೆಯಿದ್ದರೆ, ನನಗೆ ಕಠಿಣಶಿಕ್ಷೆ ಕೊಡಿ[illegible]

ಮಹಾತ್ಮರ ಸಂಬಂಧದ ಭವಿಷ್ಯವು ನಿಜವೇ?

—o—

[illegible] ಮಹಾತ್ಮರ ಭವಿಷ್ಯವನ್ನು [illegible] ಕೇಳಿರುವೆವು, [illegible] ಮಹಾತ್ಮರು [illegible] [illegible] ಮಹಾತ್ಮರು [illegible] ಆದರೆ [illegible] ಹಾಕಿಕೊಟ್ಟ [illegible] ನನ್ನ ಕರ್ತವ್ಯ [illegible] [illegible].

ಮಹಾತ್ಮರ [illegible]

—o—

೧೮ ನೇ ತಾರೀಖಿಗೆ ೧೨ ಗಂಟೆಯ ಸುಮಾರಕ್ಕೆ ಮಿ. [illegible] ಮುಂದೆ [illegible] [illegible] ಅಂಗಾಗಳ [illegible] [illegible] ಮಹಾತ್ಮರು [illegible] [illegible] ಆವರಿಗೂ ಸಂಪ್ರೈಯ ನಮಸ್ಕಾರ [illegible] ವು. ೧೨ ಕ್ಕೆ [illegible] ಬಂದರು.

ಗಾಂಧೀ ಸ್ನೇಹಿತರಿಗೆ [illegible]

—(o)—

ಮ, ಗಾಂಧಿಯವರಿಗೆ ಶಿಕ್ಷೆಯಾದ ಸುದ್ದಿಯನ್ನು ಕೇಳಿ, ಅಸಹಕಾರದ ಕಟ್ಟಾಭಿಮಾನಿಗಳಿಗೆ ಹಾಲು ನೀರು ಕುಡಿದಂತಾಯಿತೆಂದು ಕೆಲವರನ್ನುವರು. ಇದು ನಮ್ಮ ಮನಸಿಗೆ ಹೇಗೇಗೋ ಆನಿಸುತ್ತಿದೆ. ಅಸಹಕಾರದ ವಿರುದ್ಧವಿದ್ದ ಸಹವಾದಿಗಳೆಲ್ಲರೂ ಮಹಾತ್ಮರ ಯೋಗ್ಯತೆಯನ್ನು ಬಲ್ಲರು. ಅವರ [illegible]

[illegible] ಸ್ವಾರ್ಥ[illegible]ರೆ ಅವಿದ[illegible] [illegible]ವರ ವಿಶ್ವಾಸವಿಲ್ಲ. ಆದ್ದರಿಂದ ಅವರು ಅವರ [illegible] ಮಹಾತ್ಮರನ್ನು ವಿರೋಧಿಸುವರೇ ಹೊರತು, ಅವರು ಎಂದೂ ಮಹಾತ್ಮರನ್ನು ದ್ವೇಷಿಸುವದಿಲ್ಲ. ಅವರಿಗೆ [illegible] [illegible] ಆದರೂ ಅವರ [illegible] [illegible] ಮಹಾತ್ಮರ [illegible].

[illegible]

—o—

[illegible]

—o—

ಮಿ. ಗಾಂಧಿ [illegible] [illegible] [illegible] ಲಕ್ಷಾವಧಿ [illegible] [illegible] ಹಿಂದೀ [illegible] ನಾನು [illegible] ಸರಕಾರದ ಅಪರಾಧವನ್ನು [illegible] ನ್ಯಾಯನಿರ್ಣಯಮಾಡುವದು ನನ್ನ ಕರ್ತವ್ಯ [illegible] [illegible] ಶಿಕ್ಷೆಯನ್ನು [illegible] ೧೨ ವರ್ಷದ [illegible] ಬಾಳಗಂಗಾಧರ ಟಿಳಕರ ಶಿಕ್ಷೆಯು [illegible] ಅವರಿಗೆ ೬ ವರ್ಷಗಳ [illegible] ಶಿಕ್ಷೆ [illegible] ಅಷ್ಟೇ ಶಿಕ್ಷೆ [illegible]. ಒಂದು

[illegible]ವೇಳೆ ಹಿಂದೀ ವಾತಾವರಣವು ಶಾಂತವಾಗಿ, ಸರಕಾರವು ನಿಮ್ಮ ಶಿಕ್ಷೆಯನ್ನು ಕಡಿಮೆಮಾಡಿದರೆ [illegible] ಬ್ಯಾಂಕರರ [illegible] ನಿಮ್ಮ ಮೇಲೆ ನಿ[illegible] [illegible] ಗುರುವಿನ ವರ್ಷಗಳ್ನು ಹೆಚ್ಚಾಗಿರುವವೆಂದು [illegible] ತೋರುತ್ತದೆ. ನಿಮಗೆ ಒಂದು ವರ್ಷದ [illegible] ೧೦೦೦ರೂ. ದಂಡವನ್ನು ವಿಧಿಸುವೆ. ದಂಡಕೊಡದಿದ್ದರೆ ೬ ತಿಂಗಳ ಹೆಚ್ಚು ಶಿಕ್ಷೆಯನ್ನು ಕೊಡುವೆನು.

ಶಿಕ್ಷೆಯ ನಂತರ ಮಹಾತ್ಮರ ಉದ್ಗಾರಗಳು [illegible] ಬಾಳಗಂಗಾಧರ ಟಿಳಕರ [illegible] ಸ್ಮರಣೆಗೆ [illegible] ಕೊಟ್ಟದ್ದರಿಂದ ನಾನು [illegible] [illegible] ನನಗೊಂದು ಸನ್ಮಾನವಾಯಿತೆಂದು ನಾನು [illegible]. ಶಿಕ್ಷೆಯ ಸಂಬಂಧದಿಂದ [illegible] ಶಿಕ್ಷೆ ಕೊಡುವ ನ್ಯಾಯಾಧೀಶನೇನನಗೆ [illegible] [illegible].

[illegible] ಮಹಾತ್ಮರ ಅನುಯಾಯಿಗಳೆಲ್ಲರೂ ಮಹಾತ್ಮರಿಗೆ ಸಾಷ್ಟಾಂಗ ನಮಸ್ಕಾರ ಹಾಕಿದರು. [illegible] ದೃಶ್ಯವು.

....

ಕರ್ನಾಟಕ ವೈಭವವೂ ದಬ್ಬಾಳಿಕೆಯಬಲೆಯಲ್ಲಿ ಆಡಕಿಕೊಂಡಿತು.

—o—

ಕರ್ನಾಟಕ ವೈಭವದ ಸಂಪಾದಕರಾದ ಶ್ರೀ. ಜಯರಾವ ದೇಶಪಾಂಡೆಯವರ ಮೇಲೆ ೧೨೪ನೇ ಕಲಮಿನ [illegible] ಅವರು ತಮ್ಮ [illegible] ತಮ್ಮ ಮೇಲೆ ಹೆಗಡ ೧೨೪ನೇ ಕಲಮು ಹೇಗೆ ಲಾಗೂಯಿರುವದೆಂಬದನ್ನು ಗಿಲವಾಡಿನ ಸಾಕ್ಷಿದಾರರ ವರ್ಣನೆಯನ್ನು ಮಾಡಿ ತಮ್ಮ ಮೇಲೆ ಹೆಗಡ ೧೨೪ ನಿರುಪಯುಕ್ತವಾದದ್ದೆಂದು ತಿಳಿಸಿದ್ದರು. ಆದರೂ ಮೊನ್ನೆ ಮ್ಯಾಜಿಸ್ಟ್ರೇಟರು ಅವರಿಗೆ ೧ ವರ್ಷದ ಸಶ್ರಮ ಶಿಕ್ಷೆಯನ್ನು ವಿಧಿಸಿದರೆಂದು ಮೊನ್ನೆಯಿಂದ [illegible] ಸಾರಾಂಶವಾಗಿದೆ. ಇತ್ತಿತ್ತಲಾಗಿ ಅವರು ತಮ್ಮ ಶರೀರದ ಆಸ್ವಸ್ಥತೆಯ ಮೂಲಕ ಕರ್ನಾಟಕದ ವೈಭವದ ಸಂಪಾದಕತ್ವವನ್ನು ಬಿಟ್ಟು, ಹನೆ ಒದಲಾಯಿಸುವದಕ್ಕಾಗಿ ಆಲಮಟ್ಟಿಯಲ್ಲಿ ಬಂದಿರುತ್ತಿದ್ದರು. ಸಾಗಲಿ. ವಿಜಾಪುರದ ಒಂದು ಪತ್ರವೂ ದಬ್ಬಾಳಿಕೆಯ ಬಲೆಯಲ್ಲಿ ಆಡಕಿಕೊಂಡಂತಾಯಿತು. [illegible] ಬಾಗಲಕೋಟಿ ಯೊಂದುಳಿಯಿತು.

ವಕೀಲಂಗ ಕಮಿಟಿಯ ಠರಾವು.

—೦—

ಅಹಮದಾಬಾದದಲ್ಲಿ ಕೂಡಿದ ವಕೀಲಂಗ ಕಮಿಟಿಯು ಬಾರಡೋಲಿ, ದಿಲ್ಲಿಯ ವಕೀಲಂಗ ಕಮಿಟಿಯ ಠರಾವಿಗನುಸರಿಸಿ ಕಾಂಗ್ರೆಸ, ಖಿಲಾಫತಿಯ ಪ್ರಚಾರಕರೆಲ್ಲರೂ ಕಾಯಿದೆಭಂಗ [illegible] ಕಾರ್ಯವನ್ನು ಕೈಕೊಳ್ಳಬೇಕೆಂದು ನಿರ್ಧರಿಸಿದರು. ಯೋಗ್ಯವೇ ಆಯಿತು, ಸ್ವ[illegible] ಸ್ವರಾಜ್ಯದ ಮುಖ್ಯ

ಧಾರವಾಡ ಮ್ಯು. [illegible]

[illegible]

—

[illegible] ಉದ [illegible] ಕೊರತೆಗಾಗಿ [illegible] ನಮಗೆ [illegible]

[illegible]

ಸಿಮ್ಲಾಕ್ಕೆ ಈ ಸಾಹಸವನ್ನು ಮಾಡಿರುವರೋ? [illegible] ಪೋಲೀಸರ ಸಹಾಯ [illegible]

ನಿಮ್ಮ ನೀತಿ ಬಹುಜನರ ಧಾರವಾಡ. ನೀವು ಚುನಾಯಿಸಿದ ಮೆಂಬರರು ನಿಮ್ಮ ಅಧಿಕಾರದ ಕೈಕೆಳಗಿರುವವರು. ಈ ರೀತಿ ಅನ್ಯಾಯವು ನಡೆಯುವುದು ಸರಿಯಾಗಿದ್ದರೆ ಏನೂ ಆತಂಕವಿಲ್ಲ. ಹೇಗಾದರೂ ನಿಮ್ಮ ವರ್ತನ ವಿಷಯವಾಗಿ ಜನರಲ್ಲಿ ಸಂಶಯವು ಹುಟ್ಟುವ ತರಹದ ಕೃತಿಯನ್ನು ಮಾಡಬೇಡಿರೆಂದೇ ನಮ್ಮ ಹೇಳಿಕೆಯು.

—

ಮಹಾತ್ಮರ ಪತ್ನಿಯವರಿಗೆ ಮೌ. ಅಬದುಲ್ ಬಾರೀ ಸಾಹೇಬರು ಸಹಾನುಭೂತಿಪರ ತಾರು ಕಳಿಸಿರು[illegible]

ಅಮೂಲ್ಯ ಸಂಧಿ

ಆತಂಕನಿಗ್ರಹ ಮಾತ್ರೆಗಳು



ಅಜೀರ್ಣವನ್ನು ಹೋಗಲಾಡಿಸಿ, ಶುಭ್ರವಾದ ರಕ್ತವನ್ನುಂಟು ಮಾಡಿಸಿ ದೇಹವನ್ನೂ, ಬುದ್ಧಿ ಇತ್ಯಾದಿಗಳನ್ನೂ ಅಭಿವೃದ್ಧಿ ಪಡಿಸುವದಲ್ಲದೆ, ಸಾವಿರಾರು ಜನರು ಅನಕೂಲ ಗುಣಗಳನ್ನು ಹೊಂದಿರುವರು. ಒಂದು ರೂಪಾಯಿ ಕೊಟ್ಟು ಈ ಎಲ್ಲ ಅನುಭವಗಳನ್ನು ಪಡೆಯಬಹುದು. ಇದಲ್ಲದೆ ಇನ್ನು ಇತರ ಅಂದರೆ ಸಕಲವಾದ ಔಷಧಿಗಳ ತಿಳಿಸುವದಕ್ಕಾಗಿ ಈ ಕೆಳಗಿನ ಅಡ್ರೆಸಿಗೆ ಬರೆಯುವಲ್ಲಿ ತಿಳಿಸುವೆವು.

ನಮ್ಮ ವಿಳಾಸ—
ಆತಂಕನಿಗ್ರಹ ಔಷಧಾಲಯ.
೨೭ ಥಂಬುಚೆಟ್ಟಿ ಮದರಾಸು.

ನೋಟೀಸು

—೦—

ಅಕ್ಷರಾ [illegible] ತಾಲೂಕ ಉರ್ಫ [illegible]

ಕೆಳಗೆ ಸಹಿ ಮಾಡಿದವರಿಂದ ಈ ನೋಟೀಸು [illegible]

ನೀನು ನನ್ನ ಲಗ್ನದ ಗಂಡನಿದ್ದು [illegible] ವರ್ಷಗಳಾದವು. ಈ [illegible] ವರ್ಷಗಳ [illegible] ನನ್ನನ್ನು [illegible] ಮಾಡಿ [illegible] ಕೇಳೆ ನನ್ನನ್ನು [illegible] ಮಾಡುತ್ತಿದ್ದಿ. [illegible] ನಾನು ಮುಪ್ಪಿನಲ್ಲಿಗೆ ಬಂದು ಈಗ [illegible] ಮಾಡಿಕೊಂಡು ಇರುತ್ತಿ [illegible] ವರ್ಷಗಳಾದವು. ಈ ಅವಧಿಯಲ್ಲಿ ನೀನು ಬಂದು ಕರಕೊಂಡು ಹೋಗಲಿಲ್ಲ. ನನ್ನ ಹೊಟ್ಟೆ [illegible] ಗಳ ಸಾಲವಾಗಿದೆ ಈ ನೋಟೀಸು ಮುಟ್ಟಿದ [illegible] ದಿವಸಗಳಲ್ಲಿ ಬಂದು ನನ್ನ ಸಾಲ ತೀರಿಸಿ ಕರೆದುಕೊಂಡು ಹೋಗಬೇಕು. ಇಲ್ಲವಿದ್ದರೆ [illegible] ತಿಳಿಯಬೇಕು. ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲಿದೆ. ತಿಳಿಯಬೇಕು ತಾ. ೨೧-೩-೨೩ ರಂದು

ಈ ಎದ್ಗೆ [illegible] ಕೋಂ ಅಲ್ಲೀನಸಾ [illegible] ಉರ್ಫ ಮುಜಾವರ [illegible]

ವಕೀಲ ಹಾಗೂ ಪಕ್ಷಗಾರರಿಗೆ

ಉಪಯುಕ್ತ

ವರಕಾಲತನಾಮೆ, ವಕೀಲ ಪತ್ರ
ಎಂಥಾದ್ದೇ ಮೊದಲಾದ ಪತ್ರಿಕೆಗಳು
[illegible] ಯೋಗ್ಯದರದಿಂದ ನಮ್ಮಲ್ಲಿ ದೊರೆಯುವವು.
“ ಕ್ಷೆ ” ಮ್ಯಾನೇಜರ ವಿಜಯ-ಧಾರವಾಡ

ಉತ್ತಮ ತರದ ಮಾಲು ಕ್ರಯ ಸುಲಭ

—೦—

ಮಕ್ಕಳ ಆಟದ [illegible] ಯು ೩೨ ಸಾಮಾನುಗಳು ಸಣ್ಣ ಪೆಟ್ಟಿಗೆ ರೂ. ೧-೦ ಮಧ್ಯಮ ೩-೦-೦ ಉತ್ತಮ ರೂ. ೪-೮-೦ ದೊಡ್ಡದು ೬-೦-೦ ಪೋಸ್ಟ ಖರ್ಚ ಬೇರೆ ಮತ್ತು ಕಾಶಿಯಲ್ಲಿ ತಯಾರಾಗುವ ರೇಷ್ಮೆ ಮಡಿ [illegible] ಕಾಶ್ಮೀರ ಶಾಲು ರುದ್ರಾಕ್ಷೆ ಶ್ರೀಚಕ್ರ ಸ್ಫಟಿಕ ಮಣಿ, ಲಿಂಗಧಾವಲಿ [illegible] ವಸ್ತುಗಳನ್ನು ಕೇಳುವವರಿಗೆ ವ್ಹಿ. ಪಿ. ಮೂಲಕ ಕಳುಹಿಸಲಾಗುವದು ಕಾಟಲಾಗು ಇನಾಂ

ವಿಳಾಸ:— ಎಸ್ ಹೆಚ್ ನಾರಾಯಣಾಚಾರ್ಯ ಮತ್ತು ಕಂಪನಿ, [illegible] ಕಾಶಿಕ್ಷೇತ್ರ

ವಿವಿಧ ಕನ್ನಡ ... ಗದಗಿನಲ್ಲಿ ೧೯೨೦ ಆರಂಭಿಸಲಾದ
ಸಾಮಾಜಿಕ, ರಾಜಕೀಯ, ನೈತಿಕ, ಧಾರ್ಮಿಕ, ವಿಷಯಗಳನ್ನು
ಪ್ರತಿಪಾದಿಸುವ.

ಕರ್ನಾಟಕ ಸಿಂಹ.

—o—

ಏಕ ಕನ್ನಡ ವಾರ ಪತ್ರಿಕೆಯು.

ವರ್ಗಣಿ ಸ್ಥಳೀಕರಿಗೆ. ಪರಸ್ಥಳದವರಿಗೆ.
ರೂ. ೩-೦-೦ ರೂ. ೩-೧೨-

ಇವತ್ತಿನಿಂದ ಮೂರುತಿಂಗಳ ಒಳಹೊರಗೆ ಹೊರಡುವದು. ಮೇಲೆ ವಿವರಿಸಿದ ವಾರಪತ್ರಿಕೆಯು ಬಾಲ್ಯದಿಂದ ಭಾಷಾಸೇವೆಯನ್ನು ಮಾಡುತ್ತಿದ್ದ. ಮತ್ತು ಮೈಸೂರ ಹಾಗೂ ಧಾರವಾಡ ಕರ್ನಾಟಕ ವಿದ್ಯಾವರ್ಧಕಸಂಘದಿಂದ ಬಹುಮಾನಗಳನ್ನು ಪಡೆದ ... ಕೃಷ್ಣರಾವ ಮುಧೋಳಗೋಳ ಇವರ ಸಂಪಾದಕತ್ವದ ಕೆಳಗೆ ಹೊರಡುವದಲ್ಲದೆ ಆಬಾಲವೃದ್ಧರಿಗೆ ತಿಳಿಯುವಂಥ ತಿಳಿಗನ್ನಡ ಭಾಷೆಯಲ್ಲಿ ಬರೆದ ಲೇಖಗಳನ್ನು ಅದರಲ್ಲಿ ಕೊಡುವರು. ಗ್ರಾಹಕರು ತಮ್ಮ ಸಂಪೂರ್ಣ ಹೆಸರನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಬೇಕಾಗಿ, ಸವಿನಯವಿನಂತಿ ಇರುತ್ತದೆ.

ವಿಳಾಸ:— ರಾಂತಪ್ಪಾ ಸಿದ್ದಪ್ಪಾ ಬಲಗುಂದ
ಮಾಲಕ ಸ್ಪೈಮನ್ ಪ್ರೆಸ ಗದಗ ಜಿ. ಧಾರವಾಡ

* * * * *

ನೋಟೀಸು.

ಹಾವೇರಿ ಮುನಸಿಪಾಲಿಟಿ ಕಚೇರಿಯಿಂದಾ ಯಾವತ್ತೂ ಜನರಿಗೆ ತಿಳಿಸುವದೇನಂದರೆ—

ಹಾವೇರಿ ಮುನಸಿಪಾಲಿಟಿ ಹದ್ದಿಯಲ್ಲಿ ಈ ಮುನಸಿಪಾಲಿಟಿ ನೇಮಗಳ ಅನುಸರಿಸಿ ಟೋಲಕರಾ ವಸೂಲಮಾಡುವ ಕೆಲಸವನ್ನು ತಾರೀಖು ೧ ಯಪ್ರಿಲ ೧೯೨೨ ರಿಂದಾ ತಾರೀಖು ೩೧ ನೇ ಮಾರ್ಚ ೧೯೨೩ ರ ವರಿಗೆ ಯರಡೂ ದಿವಸಗಳು ಸಹಿತ ಒಂದು ವರ್ಷದ ಮಟ್ಟಿಗೆ ಮಕ್ತೆಯಿಂದ ಕೊಡತಕ್ಕದ್ದಿದೆ. ಮಕ್ತೆಯಿಂದಾ ಹಿಡಿಯಬಪೇಕ್ಷಿಸುವ ಕಂಟ್ರಾಕ್ಟರ ಜನರು ತಮ್ಮ ಲಾಯಿಕಿ ಸರಟೀಫಿಕೇಟ ಸಹಿತಾ ತಾರೀಖು ೨೮ ನೇ ಮಾರ್ಚ ೧೯೨೨ ನೇ ಇಸವಿಯ ದಿ ವ ಸ ಸಂಜೆ (೫) ಘಂಟೆ ವಳಗಾಗಿ ಕೆಳಗೆ ಸಹಿ ಮಾಡಿದವರ ಕಡೆಗೆ ಮುಟ್ಟುವಂತೆ ಟೆಂಡರಗಳನ್ನು ಕಳಿಸಬೇಕು. ಹೆಚ್ಚಿಗೆ ಅಗರ ಕಡಿಮೆ ರಕಮಿನ ಟೆಂಡರ ಮಂಜೂರ ಮಾಡುವದು ಅಗರ ಬಿಡುವದು ಮುನಸಿಪಾಲಿಟಿಯವರ ಮರ್ಜಿಮೇಲೆ ಅದೆ ಟೆಂಡರ ಮಂಜೂರ ಆದ ಕೂಡಲೆ ಮಂಜೂರ ರಕಮಿನ ¼ ಪಾಲು ಡಿಪಾಜಿಟ್ಟು ಇಡಬೇಕಾಗುವದಲ್ಲದೆ ಟೆಂಡರಿನ ರಕಮಿನಬಗ್ಗೆ ಜಾಮೀನು ಸಹಾ ಕೊಡಬೇಕಾಗುವದು ಟೋಲ ರೂಲ್ಸುಗಳು ಮುನಸಿ ಪಾಲಿಟಿ ಆಫೀಸನಲ್ಲಿ ಆಫೀಸ ವೇಳೆಯಲ್ಲಿ ನೋಡಲಿಕ್ಕೆ ಸಿಗುವದು ತಿಳಿಯುವವು.

ಹಾವೇರಿ B. C. Chokki
೮೧-೩-೨೨ ಪ್ರೆಸಿಡೆಂಟ
ಹಾವೇರಿ ಮ್ಯುನಸಿಪಾಲಿಟಿ.

ಅಪೂರ್ವ ಅಲಭ್ಯ ಪ್ರೇಕ್ಷಣೀಯ

ಫಡಕೆ ಇವರ ಚಿತ್ರಕಲಾ ಪ್ರದರ್ಶನ

ಮುಂಬಯಿ, ಮೈಸೂರ, ಮದ್ರಾಸ, ಬಡೋದಾ ವಗೈರೆ ಪ್ರದರ್ಶನದಲ್ಲಿ ಬಂಗಾರದ ಹಾಗೂ ಬೆಳ್ಳಿಯ ಪದಕಗಳನ್ನು ದೊರಕಿಸಿದಂಥ, ಹಿಂದುಸ್ಥಾನದೊಳಗಿನ ಪ್ರಸಿದ್ಧ ಚಿತ್ರಕಾರರಾದ ಶ್ರೀ ಫಡಕೆ ಇವರು ತಯಾರಮಾಡಿದ ನೋಡುವ ಹಾಗು ಹಸ್ತ ಕೌಶಲ್ಯದ ಸಜೀವ ಚಿತ್ರಗಳ ಶಿಲ್ಪಕಲೆಯ ಅತ್ಯುತ್ತಮವಾದ ಜಾಗ್ರತ ಪ್ರದರ್ಶನವು.

ಕೇವಲ ಜನರ ಆಗ್ರಹದ ಸಲುವಾಗಿ ಈ ಪ್ರದರ್ಶನವನ್ನು ಹುಬ್ಬಳ್ಳಿಯ ದುರ್ಗದ ಬೈಲಿನಲ್ಲಿ ಮಿ. ಮಹೀಂದ್ರಕರ ಫೋಟೋಗ್ರಾಫರ ಇವರ ಮನೆಯ ಮುಂದೆ ತೆರೆಯಲ್ಪಟ್ಟಿದೆ.

ಇದರಲ್ಲಿ ಕೈಲಾಸವಾಸಿ ಲೋಕಮಾನ್ಯ ಟಿಳಕ ಮತ್ತು ಮಹಾತ್ಮಾ ಗಾಂಧಿ ಮುಂದಾಳುಗಳ ಅಗದೀ ಸಜೀವ ಹಾವ ಭಾವ ಮಾಡುವ ಚಿತ್ರಗಳು ಇದ್ದು ಎರಡನೇ ದೇವತೆಗಳ ಮೂರ್ತಿಗಳನ್ನು ಪ್ರದರ್ಶನದಲ್ಲಿ ಇಡುವದರಲ್ಲಿ ಬಂದಿದೆ.

ಆದ್ದರಿಂದ ಇಲ್ಲಿಯ ರಸಿಕ ಹಾಗು ಗುಣಜ್ಞ ನಾಗರೀಕರು ಈ ಅಪೂರ್ವಸಂಧಿಯ ಉಪಯೋಗ ಮಾಡಿಕೊಳ್ಳುವರೆಂಬ ನಂಬಿಗೆಯದೆ.

ದುರ್ಗದಬೈಲರೋಡ ಹುಬ್ಬಳ್ಳಿ | ಮ್ಯಾನೇಜರ
೫-೨-೨೨ | ಫಡಕೆ ಚಿತ್ರಕಲಾ ಪ್ರದರ್ಶನ

ಓದಿರಿ! ಓದಿರಿ!! ಓದಿರಿ

ಅದ್ಭುತಮಹಿಮೆ! **ನಭೂತೋನಭವಿಷ್ಯತಿ** ಅದ್ಭುತಮಹಿಮೆ!

ಪಾಪಮುಕ್ತರಾಗಿರಿ. ಸುಖಿಗಳಾಗಿರಿ.

ಪ್ರತಿಗಳು ಕಡಿಮೆ ಉಳಿದಿರುವವು. **ಶ್ರೀ ಸಾಧುವರ್ಯ** ಬೇಗ ತರಿಸಿ

ಸಿದ್ಧಪ್ಪನವರ ಚರಿತ್ರೆಯು.

ಈ ಮಹಾಮಹಿಮರು ಶಿವಾಧೀನರಾದ ೧೦ ತಿಂಗಳೊಳಗಾಗಿಯೇ ಇವರ ಮಹಿಮೆಯು ದಿಕ್ತಟಗಳಲ್ಲೆಲ್ಲ ವ್ಯಾಪಿಸಿರುವದು. ಹುಬ್ಬಳ್ಳಿ ತಾಲೂಕು ಉಣಕಲ್ಲ ಗ್ರಾಮದಲ್ಲಿ ಇವರ ಸಮಾಧಿಸ್ಥಳವಿರುವದು. ಇಂಥ ಜ್ಯೋತಿಗಳನ್ನು ಕಲಿಯುಗದಲ್ಲಿ ಕಾಣುವದು ಅಪರೂಪ. ಇವರು ಶಿವಾಧೀನರಾಗುವ ಕಾಲವನ್ನು ೨೨ ದಿವಸ ಮುಂಚೆಯೇ ತಮ್ಮ ಭಕ್ತ ಜನರಿಗೆಲ್ಲ ಸಾರಿ ಹೇಳಿದ್ದರು.

ಪ್ರತಿ ಸೋಮವಾರ, ಗುರುವಾರಗಳಲ್ಲಿ ಅಗಣಿತ ಜನ ಸಮುದಾಯವು ಉಣಕಲ್ಲಿಗೆ ಬಂದು ಅವರ ಸಮಾಧಿಯ ದರ್ಶನ ತೆಗೆದುಕೊಂಡು ಹೋಗುವದು. ಭಕ್ತಜನರು ಕೇವಲ ದುಡ್ಡು ಎರಡು ದುಡ್ಡುಗಳಂತೆ ಸಮಾಧಿಯ ಮುಂದಿಟ್ಟ ಹಣವೇ ಎರಡು ಸಾವಿರ ರೂಪಾಯಿಗಳವರೆಗೆ ಕೂಡುವದು. ಮನುಷ್ಯರಷ್ಟೇ ಅಲ್ಲ. ಪಶು ಪಕ್ಷಿಗಳು ಸಹ ಅವರ ಸಮಾಧಿಗೆ ನಡೆಕೊಳ್ಳುತ್ತಿರುವವು.

ಇಂಥ ಸಾಧುವರ್ಯರ ಮಹಿಮೆಯು ಸರ್ವತ್ರ ಪ್ರಸಿದ್ಧವಾಗಿ ಎಲ್ಲರಿಗೂ ಉಪಯೋಗವಾಗಬೇಕು. ಈ ಸದ್ಭಾವನೆಯಿಂದಲೇ ನಾವು ಅವರ ಚರಿತ್ರೆಯನ್ನು ಅನೇಕ-ವಿದ್ವಜ್ಜನರ ಸಹಾಯದಿಂದ ಸಂಗ್ರಹಿಸಿ ಅನೇಕ ಹೊಸ ಗೊತ್ತಾದ ಅವರ ಎಲ್ಲ ಮಹಿಮೆಗಳನ್ನು ಸೇರಿಸಿ. ಅವರ ಸುಂದರವಾದ "ಫೋಟೋ"ವನ್ನು ಕೊಟ್ಟು ಪುಸ್ತಕ ಬರೆಸಿರುವೆವು. ಅದರ ಬೆಲೆ ಕೇವಲ ಕಡಿಮೆ. ಅಂದರೆ ಹನ್ನೆರಡು ಆಣೆ ಇಟ್ಟಿರುವೆವು. ಅಂಚೆಯ ವೆಚ್ಚ ಬೇರೆ ಕೊಡತಕ್ಕದು.

ಎಲ್ಲ ಕನ್ನಡಿಗರು ಈ ಪುಸ್ತಕವನ್ನು ತರಿಸಿಕೊಂಡು ತಮ್ಮ ನಿಜವಾದ ಲಾಭವನ್ನು ಮಾಡಿಕೊಂಡರೆ ನಮ್ಮ ಶ್ರಮದ ಸಾಫಲ್ಯವಾಯಿತೆಂದು ತಿಳಿಯುವೆವು.

ಇವರ ಚರಿತ್ರೆಯನ್ನು ಅನೇಕ ಜನರು ಬರೆದಿರುವರು. ಆದರೆ ಕೇವಲ ಧಾರ್ಮಿಕ-ಬುದ್ಧಿಯಿಂದ ಸ್ವಾರ್ಥಾಪೇಕ್ಷೆಯಿಲ್ಲದೆ, ಸಾಹಸಮಾಡಿ ವಿಷಯ ಸಂಗ್ರಹಮಾಡಿದ ಈ ಪುಸ್ತಕವು ಅತ್ಯುಪಯುಕ್ತವಾದದ್ದು. ಕುರುಡರು, ಕುಂಟರು, ಮಕ್ಕಳಿಲ್ಲದವರು, ನಾನಾತರದ ಬೇನೆಯಿಂದ ಬಳಲುವವರು ಒಂದು ವಾರ ಮಾತ್ರ ಈ ಸಮಾಧಿಗೆ ನಡೆಕೊಂಡರೆ ಸಾಕು. ಅವರ ಪಾಪವೆಲ್ಲ ಪರಿಹಾರವಾಗಿ ತಮ್ಮ ಅಭೀಷ್ಟವನ್ನು ಪ್ರಾಪ್ತಿಮಾಡಿಕೊಳ್ಳುವರು. ಇಂತು ಲಾಭಮಾಡಿಕೊಂಡವರ ಉದಾಹರಣಗಳು ಲಕ್ಷಾಂತರ ಇರುವವು.

ಈ ಚರಿತ್ರೆಯಲ್ಲದೆ ನಮ್ಮಲ್ಲಿ ಎಲ್ಲ ತರದ ಕಥೆ ಕಾದಂಬರಿಗಳೂ, ಶಾಲೋಪಯೋಗಿ ಪುಸ್ತಕಗಳೂ, ಇತರ ಪುಸ್ತಕಗಳೂ, ಎಲ್ಲ ಸಾಮಾನುಗಳೂ ಸಿಗುವವು. ಸಿಂದಾಳಕರಲ್ಲಿ ಎಲ್ಲ ಪುಸ್ತಕಗಳೂ ಸಿಗುವವು.

ಎ. ಆರ್. ಶಿವನಾಗಪ್ಪಾ ವಾಗ್ವಿಲಾಸ.
ಹುಬ್ಬಳ್ಳಿ.

ಈ ಪತ್ರವನ್ನು ಸತ್ಯಬೋಧ ರಾಮಚಂದ್ರ ಆಗಬಿಡ್ಡಿ ಇವರು ಧಾರವಾಡದಲ್ಲಿ ತಮ್ಮ ನ್ಯಾಶನಲ ಪ್ರೆಸ್ಸಿನಲ್ಲಿ ಮುದ್ರಿಸಿಪ್ರಸಿದ್ಧಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ

- ಸ್ಥಾಪಕರು -
ಶ್ರೀ. ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.
(೧೯೨೦)

ಬೆಲೆ ೬ ಪೈ

ವರ್ಷ ೩) ಧಾರವಾಡ, ಗುರುವಾರ ತಾರೀಖು ೨೩ ನೇ ಮಾರ್ಚ ೧೯೨೨. (ಸಂಚಿಕೆ ೬೬

ಮಹಾತ್ಮರ ಜವಾಬು.

———೦———

ಕಟ್ಟಾ ರಾಜನಿಷ್ಠನೂ, ಸಹಕಾರಿಯೂ ಇದ್ದ ನಾನು ಈಗ ಅರಾಜನಿಷ್ಠ ಹಾಗೂ ಅಸಹಕಾರಿಯಾದೆನೆಂಬುದನ್ನು ಹೇಳುವದು ನನ್ನ ಕರ್ತವ್ಯವು. ಅದರಂತೆಯೇ ಕಾಯದೆಯಿಂದ ಪ್ರಸ್ಥಾಪಿಸಲ್ಪಟ್ಟ ಸರಕಾರ ವಿಷಯವಾಗಿ ಅಪ್ರೀತಿಯನ್ನುಂಟು ಮಾಡಿದ ಅಪರಾಧವನ್ನೇಕೆ ಒಪ್ಪಿಕೊಳ್ಳುವೆನೆಂಬುದನ್ನು ಹೇಳುವದೂ ನನ್ನ ಕರ್ತವ್ಯವಾಗಿದೆ. ನನ್ನ ಸಾರ್ವಜನಿಕ ಆಯುಷ್ಯ ಕ್ರಮಕ್ಕೆ ೧೮೯೩ರ ಆಫ್ರಿಕೆಯ ಗೊಂದಲದಿಂದ ಪ್ರಾರಂಭವಾಯಿತು, ನಾನು ಮನುಷ್ಯ ಪ್ರಾಣಿಯು ಹಾಗೂ ಹಿಂದೀ ಎಂಬ ಕಾರಣದಿಂದ ನನಗೆ ಹಕ್ಕುಗಳೇ ಇಲ್ಲೆಂಬ ಕಲ್ಪನೆಯಾಯಿತು. ಇಷ್ಟೇ ಅಲ್ಲ. ಹಿಂದೀ ಇರುವದರಿಂದಲೇ ನನಗೆ ಹಕ್ಕಿಲ್ಲೆಂಬುದಾಗಿ ತಿಳಿಯಬಂತು. ಹಿಂದೀ ಜನರನ್ನು ಹೀಗೆ ನಡೆಯಿಸಿ ಕೊಳ್ಳುವದು ಅನ್ಯಾಯವೆಂದು ನನಗೆ ಕಂಡು ಬಂತು. ಆದ್ದರಿಂದ ನಾನಾಗಿಯೇ ಸರಕಾರದೊಡನೆ ಸಹಕಾರ ಮಾಡಿ, ಯೋಗ್ಯ ಪ್ರಸಂಗದಲ್ಲಿ ಟೀಕಾಸ್ತ್ರವನ್ನು ಹೂಡುತ್ತಿದ್ದೆನು. ಯಾವಾಗಲೂ ಸರಕಾರದ ನಾಶವನ್ನು ನಾನು ಇಚ್ಛಿಸಲಿಲ್ಲ.

೧೮೯೯ರಲ್ಲಿ ಬೋಅರ ಯುದ್ಧದಿಂದ ಸಾಮ್ರಾಜ್ಯದ ಮೇಲೆ ಗಡೆ ಬಂದಿತು. ಆಗ ನಾನು ವ್ಹಾಲಂಟಿಯರ ಕೋಅರನ್ನು ಸ್ಥಾಪಿಸಿ, ಲೇಡೀ ಸ್ಮಿಥದ ಮುತ್ತಿಗೆಯನ್ನೆಬ್ಬಿಸಲು ಹಲವು ಯುದ್ಧದಲ್ಲಿ ಭಾಗ ತೆಗೆದುಕೊಂಡೆನು. ೧೯೦೬ರಲ್ಲಿ ಝುಲು-ಬಂಡಾಯದಲ್ಲಿ ಗಾಯದವರ ಆಸ್ಥೆಕಯನ್ನು ಮಾಡುವ ಮಂಡಲವನ್ನು ಸ್ಥಾಪಿಸಿ ಆಗಲೂ ಸರಕಾರದ ಸೇವೆಯನ್ನು ಏಕೋಭಾವದಿಂದ ಮಾಡಿದೆನು. ಆ ಬಗ್ಗೆ ನನಗೆ ಪದಕಗಳು ಸಿಕ್ಕಿದ್ದು ಸರಕಾರದ ಪ್ರಿಸನೋಟನಲ್ಲಿ ನನ್ನ ಹೆಸರು ಸಹ ಬಂದಿದೆ. ಈ ನನ್ನ ಕಾರ್ಯಕ್ಕಾಗಿ ಲಾರ್ಡ ಹಾರ್ಡಿಂಗರು ಕೈಸರ ಇ ಹಿಂದ ಪದಕವನ್ನು ಸಹ ಕೊಟ್ಟಿದ್ದರು. ೧೯೧೪ರ ಮಹಾಯುದ್ಧದಲ್ಲಿ ಇಂಗ್ಲಂಡದಲ್ಲಿ ವಿದ್ಯಾರ್ಥಿಗಳ ವ್ಹಾಲಂಟಿಯರ ಕೋಅರನ್ನು ಸ್ಥಾಪಿಸಿದೆನು ಅದರಿಂದ ಉಪಯುಕ್ತ ಕಾರ್ಯವಾಯಿತೆಂದು ಅಧಿಕಾರಿಗಳು ಒಪ್ಪಿದ್ದಾರೆ. ೧೯೧೮ರಲ್ಲಿ ಲಾರ್ಡ ಚೇಮ್ಸ ಫರ್ಡರು ರಿಕ್ರೂಟ ಬೇಡಿದರು. ಆಗ ನಾನು ಅಸ್ವಸ್ಥನಿದ್ದರೂ ಖೇಡಾ ಜಿಲ್ಹೆಯಲ್ಲಿ ರಿಕ್ರೂಟ ಕಾರ್ಯದಲ್ಲಿ ತೊಡಗಿದೆನು ಅಷ್ಟರಲ್ಲಿ ಯುದ್ಧವು ಬಂದಾಯಿತು. ಹೀಗೆ ಮಾಡಿದ್ದು ಸಾಮ್ರಾಜ್ಯದಲ್ಲಿ ನನ್ನ ದೇಶಬಾಂಧವರಿಗೆ ಸಮಾನ ಹಕ್ಕು ದೊರೆಯುವದೆಂಬ ವಿಶ್ವಾಸದಿಂದಲೇ.

ಮೊದಲನೇ ದಕ್ಕೆಯು.

ಜನರ ನಿಜವಾದ ಸ್ವಾತಂತ್ರ್ಯದ ಗದೆಯು ರೌಲೇಟ ಕಾಯಿದೆಯಿಂದ ಮೊದಲನೇ ದಕ್ಕೆಯಾಯಿತು. ಆ ವಿರುದ್ಧ ಚಳವಳಿಯ ಆವ್ಹಾಹನವೇ ಎಂದು ನಾನು ತಿಳಿದೆನು. ಆಬಳಿಕ ಜಾಲಿಯನವಾಲಾ ಬಾಗದಲ್ಲಿ ಹೊಟ್ಟೆಸರೆಯುವ ಹುಕುಮು, ಫಟಕಿ ಮೊದಲಾದ ಪಂಜಾಬದ ಅತ್ಯಾಚಾರಗಳಾದವು. ತುರ್ಕಿ ಪವಿತ್ರಸ್ಥಾನದ ಸಂಬಂಧದಿಂದ ಮುಖ್ಯ ಪ್ರಧಾನರ ವಚನವು ಅಶಕ್ಯವೆಂದು ಕಂಡುಬಂತು. ೧೯೧೯ರ ಅಮೃತಸರದ ಕಾಂಗ್ರೆಸದಲ್ಲಿ ನನ್ನ ಮಿತ್ರರು ನನಗೆ ಆಗ್ರಹದಿಂದ ಹೇಳಿದರೂ ಮುಖ್ಯ ಪ್ರಧಾನರು ವಚನವನ್ನು ಪೂರ್ಣ ಮಾಡಬಹುದು. ಹೊಸಸುಧಾರಣೆಯು ಅಪೂರ್ಣವಿದ್ದರೂ ಹೊಸ ಮನ್ವಂತರವು ಪ್ರಾರಂಭವಾಗಬಹುದು. ಎಂಬ ಆಶೆಯಿಂದ ನಾನು ಹೊಸ ಸುಧಾರಣೆಯ ಪರಿಯಿಂದ ಬಡದಾಡಿದೆನು.

ಆಶೆಯ ನಿರಾಶೆಯಾಯಿತು.

ಖಿಲಾಫತಿಯ ವಚನವು ಪೂರ್ಣವಾಗಲಿಲ್ಲ. ಪಂಜಾಬದ ಅತ್ಯಾಚಾರಕ್ಕೆ ಕೈ ಎಳೆಯುಹದಾಯಿತು, ಅಪರಾಧಿಗಳು ಪಾರಾದರು. ಕೆಲವರು ಅಧಿಕಾರದ ಮೇಲೆಯೇ ಉಳಿದರು. ಕೆಲವರಿಗೆ ಹಿಂದುಸ್ಥಾನದಿಂದ ಪೆನ್‌ಶನ್ ಸಿಗತೊಡಗಿತು. ಕೆಲವರಿಗೆ ಇನಾಮು ಸಹ ಕೊಡಲ್ಪಟ್ಟಿತು. ಹೀಗಾದ್ದರಿಂದ ಸುಧಾರಣೆಯ ಅಂತಃಪ್ರವೃತ್ತಿಯಲ್ಲಿ ಏನೂ ಹೆಚ್ಚು-ಕಡಿಮೆಯಾಗಲಿಲ್ಲವೆಂತಲೂ, ಹಿಂದ್ಸ್ಥಾನದ ದುಷ್ಟನ್ನೆಳೆದೊಯ್ಯುವ ಯುಕ್ತಿಯಂತಲೂ, ಗುಲಾಮಗಿರಿಯ ಮುಂದೂಡುವ ಮಾರ್ಗವೆಂತಲೂ ನನ್ನ ಕಲ್ಪನೆಯಾಯಿತು. ಮೊದಲು ಎಂದೂ ಆಗದ ಹಾನಿಯು ಬ್ರಿಟಿಷ ಅಮಲಿನಿಂದಾಯಿತೆಂದು ನನಗೆ ಮನದಟ್ಟಾಯಿತು. ವಿರುದ್ಧ ಶಸ್ತ್ರದಿಂದ ಬಡಿದಾಡುವ ಮನಸ್ಸಿದ್ದರೂ ನಿಶ್ಶಸ್ತ್ರ ಹಿಂದುಸ್ಥಾನಕ್ಕೆ ಬಡಿದಾಡುವ ಶಕ್ತಿಯಿಲ್ಲ. ಹಿಂದುಸ್ಥಾನಕ್ಕೆ ವಸಹಾತಿಯ ಯೋಗ್ಯತೆಯು ದೊರೆಯಲು ಹಲವು ತಲೆಗಳು ಹೋಗಬೇಕೆಂಬ ಹಲವರ ಕಲ್ಪನೆಯಿಂದಲೇ ಗೊತ್ತಾಗುವದು. ಬರಗಾಲಕ್ಕೆ ಎದೆಗೊಡುವಷ್ಟು ಶಕ್ತಿಯು ಹಿಂದುಸ್ಥಾನಕ್ಕೆ ಇರಲಾರದಷ್ಟು ದರಿದ್ರವಾಗಿದೆ. ಬ್ರಿಟಿಷ ಅಮಲಿನ ಪೂರ್ವದಲ್ಲಿ ಹಿಂದುಸ್ಥಾನದಲ್ಲಿ ಲಕ್ಷಾವಧಿ ಜನರ ಮನೆಯಲ್ಲಿ ರಾಟಿಗಳು ತಿರುಗುತ್ತಿದ್ದವು. ಅರಿವೆಗಳು ತಯಾರಾಗುತ್ತಿದ್ದವು. ನಮ್ಮ ಈ ಉದ್ಯೋಗಗಳನ್ನು ಇಂಗ್ಲಿಷರು ಹೇಳಿದ ಸಾಕ್ಷಿಯಿಂದಲೇ ಕ್ರೂರ ಹಾಗೂ ಅಮಾನುಷರೀತಿಯಿಂದ ನಾಶಮಾಡಿದರು. ಆದರಿಂದ ಅರಹೊಟ್ಟೆಯಿಂದ ಸಾವಿರಾರು ಜನರು ಸಾಯುವ ಮಾರ್ಗದಲ್ಲಿರುವರೆಂಬ ಕಲ್ಪನೆಯು ಇಲ್ಲಿಯ ಪರಿಗಿರಲಿಕ್ಕಿಲ್ಲ. ಶ್ರೀಮಂತ ಜನರ ತಿರಸ್ಕಾರ ಸು ಖ ವಿ ಲಾ ಸ ವೆಂ ದ ರೆ.

ಸಲಿಕೆಯಿಂದ ದುಡ್ಡೆಳೆಯು ಪರದೇಶದ ವ್ಯಾಪಾರಿಗಳಿಗಾಗಿ.

ಬಡವರು ಕಷ್ಟಪಡೆದು ಸಂಪಾದಿಸಿದ, ಅವೂ ಅವರ ಬಾಯಿತುತ್ತನ್ನು ಹಾರಿಸಿಕೊಂಡು ಸಂಪಾದಿಸಿದ ದಲಾಲಿಯೇ ಸರಿ. ಈ ಜನರ ಬಾಯತುತ್ತನ್ನು

ಹಾರಹೊಡೆಯುವದಕ್ಕಾಗಿಯೇ ಹಿಂದುಸ್ಥಾನದಲ್ಲಿ ಕಾಯಿದೆಯಿಂದ ಪ್ರಸ್ಥಾಪಿತವಾದ ಬ್ರಿಟಿಷ ಸರಕಾರದ ರಾಜ್ಯಕಾರಭಾರವು ನಡೆದಿದೆ. ಇದಕ್ಕೆ ಯೋಗ್ಯ ಪುರಾವೆಯೆಂದರೆ ಹಳ್ಳಿಗಳಲ್ಲಿ **ಕಂಡುಬರುವ**

ಮನುಷ್ಯರೂಪೀ ಎಲವಿನ ಹಂದರಗಳೇ!

ಇದ್ದು ಯುಕ್ತಿವಾದದ, ಕುತರ್ಕಗಳನ್ನೆಷ್ಟು ರಚಿಸಿದರೂ, ಅಂಕಿಗಳ ಮೋಹಜಾಲವನ್ನು ಹರವಿದರೂ, ಈ ಪುರಾವೆಯನ್ನು ತಿರಸ್ಕರಿಸಲು ಬರಲಾರದು. ಜಗತ್ತಿನಲ್ಲಿ ಪರಮೇಶ್ವರನು ಇದ್ದರೆ ಈ ಕೃತಿಯ ಜವಾಬನ್ನು ಇಂಗ್ಲಂಡ ಹಾಗೂ ಹಿಂದುಸ್ಥಾನದ ಶ್ರೀಮಂತರು ಕೊಡಬೇಕಾಗುವದು. ಪಂಜಾಬದ ಲಷ್ಕರೀ ಕಾಯಿದೆ ಹಾಗೂ ಅದರಿಂದಾದ ಶಿಕ್ಷೆಯನ್ನು ಯೋಗ್ಯರೀತಿಯಿಂದವಲೋಕಿಸಿದರೆ ೧೦೦ಕ್ಕೆ ೯೫ ರಂತೆ ನಿಷ್ಕಾರಣವಾಗಿ ಶಿಕ್ಷೆಗೆ ಗುರಿಯಾಗಿರುವರೆಂದು ನನಗೆ ಕಂಡುಬಂತು. ರಾಜಕಾರಣದಲ್ಲಿ ಶಿಕ್ಷೆಯಾದವರಲ್ಲಿ ೧೦ ಕ್ಕೆ ೯ ಜನರು ನಿರಪರಾಧಿಗಳೆಂದು ಎದೆತಟ್ಟಿ ಹೇಳಬಲ್ಲೆನು. ಅವರ **ಅಪರಾಧವೆಂದರೆ.**

ಸ್ವದೇಶದ ಮೇಲಿನ ಅತ್ಯುಚ್ಚ ಪ್ರೇಮವೇ ಅಪರಾಧವು,

ಕಾಳಾ ಗೋರಾ ಭೇದದಲ್ಲಿ ೧೦೦ಕ್ಕೆ ೯೯ ರಂತೆ ಕೋರ್ಟಿನಲ್ಲಿ ನ್ಯಾಯ ದೊರೆಯಲಿಲ್ಲ. ಇದರಲ್ಲಿ ಅತಿಶಯೋಕ್ತಿಯಿಲ್ಲ. ಎಲ್ಲರ ಅನುಭವಕ್ಕೆ ಬಂದಿದೆ. ನನ್ನ ಮತದಿಂದ ಕಾಯಿದೆಯ ವರ್ಚಸ್ಸು **ವು ನಷ್ಟವಾಗತ್ತಿದ್ದು, ಪರಕೀಯ ವ್ಯಾಪಾರಿಗಳ ಸುಖಸೋಯಿಗಾಗಿ**

ಭರಬಾಜಾರದಲ್ಲಿ ನ್ಯಾಯದೇವತೆಯ ಮಾರಾಟ ನಡೆದದೆ.

ಕಾಯಿದೆಯಿಂದ ಪ್ರಸ್ಥಾಪಿಸಲ್ಪಟ್ಟ ರಾಜ್ಯವು ಈ ಧೋರಣದಿಂದ ನಡೆದದೆ. ಎಲ್ಲಕ್ಕೂ ಹೆಚ್ಚಿನ ದುಃಖದ ಸಂಗತಿಯೆಂದರೆ ಇಂಗ್ಲಿಷ ಅಧಿಕಾರಿಗಳಿಗೂ ಅವರ ಹಸ್ತಕರಿಗೂ ತಿಳಿಯದಾಗಿರುವದೇ ಆಗಿದೆ. ನಾನು ಈಗ ಹೇಳಿದ ಸಂಗತಿಯ ಕಡೆಗೆ ಅವರ ಲಕ್ಷ್ಯವೇ ಹೋಗಲಿಲ್ಲ. ಹಿಂದುಸ್ಥಾನದ ಹೆಚ್ಚಿಗೆಯು ಮುಂದೆ ಸಾಗುತ್ತಿರುವದೆಂಬ ಅಧಿಕಾರಿಗಳ ಪ್ರಾಮಾಣಿಕ ಮತವಿದ್ದರೆ ನನಗೆ ಆನಂದವೇ. ಒಂದೆಡೆಗೆ ವಿಚಾರೀತನದಿಂದ ಹೊರಬಿದ್ದ, ಮೇಲಿನಿಂದಲೇ ಮೋಹಕವಾಗಿ ತೋರುವ, ದಬ್ಬಾಳಿಕೆಯ ಪರಿಣಾಮಕಾರಕ ಪದ್ಧತಿಯಿದ್ದರೆ ಮತ್ತೊಂದೆಡೆಗೆ ಪ್ರತಿಕಾರದ ಸರ್ವಸಾಧನಗಳನ್ನೂ, ಆತ್ಮಸಂರಕ್ಷಣೆಯ ಉಪಾಯಗಳನ್ನೂ ತೆಗೆದುಕೊಂಡು, ಈ ಎರಡಲಗಿನ ಶಸ್ತ್ರದಿಂದ ರಾಷ್ಟ್ರದ ಪೌರುಷವೇ ಹೀನವಾಗಹೊಡಗಿದೆ. ಅವರಲ್ಲಿರುವ ಕಾಟಕನ್ನತ್ತಿಯು ಹೋಗಿ, ಅವರಲ್ಲಿ ಹೈನಿಯು ಸೇರಿಕೊಂಡಿಗಿದೆ. ಇದು ಅಧಿಕಾರಿಗಳ ಲಕ್ಷ್ಯದಲ್ಲಿ ಬರಲೊಲ್ಲದು. ಇದು ಅಧಿಕಾರಿಗಳ ಅಜ್ಞಾನ ಹಾಗೂ ಆತ್ಮವಂಚನದಲ್ಲಿ ಭರತಿಯಾಗಹೊಡಗಿದೆ. ನಾಗರೀಕರ ಸ್ವಾತಂತ್ರ್ಯತೆಗೆ ಗಡೆ ತರುವ **ಇಂಡಿಯನ ಪಿನಲ ಕೋಡಿನ ರಾಜಕೀಯ ಕಲಮುಗಳಲ್ಲಿ**

೧೨೪ ಅ ಕಲಮು ಹೆಚ್ಚಿನದು.

ಅದೇ ಕಲಮಿನನ್ವಯ ನನ್ನ ಮೇಲೆ ಆರೋಪವಿಟ್ಟದ್ದು ಒಳಿತಾಯಿತು. ಪ್ರೇಮವು ಕಾಯಿದೆಯಿಂದ ಹುಟ್ಟುವದಲ್ಲ. ಪ್ರೇಮಕ್ಕೆ ಕಾಯಿದೆಯು ಬಂಧನವು ಆಗಲಾರದು. ಒಬ್ಬನಿಗೆ ವ್ಯಕ್ತಿಯ ಅಥವಾ ವಸ್ತುವಿನ ವಿಷಯಕ್ಕೆ ಪ್ರೇಮವಿರದಿದ್ದರೆ, ಅದನ್ನು ವ್ಯಕ್ತಪಡಿಸಲು ಅವನಿಗೆ ಅಧಿಕಾರವಿರಬೇಕು. ಆಗ ಅತ್ಯಾಚಾರದ ಗಂಧವಿರದಿದ್ದರಾಯಿತು. ಮಿ. ಬ್ಯಾಂಕರ ಹಾಗೂ ನನ್ನ ಮೇಲೆ ಅಪ್ರೀತಿಪ್ರಸಾರದ ಆರೋಪವದೆ. ಈ ಆರೋಪದ ಮೇಲಿಂದಲೇ ಹಿಂದುಸ್ಥಾನದ ಅತ್ಯಂತ ಲೋಕಪ್ರಿಯ ಮುಖಂಡರಿಗೆ ಶಿಕ್ಷೆಯಾಗಿದೆ. ಅದ್ದರಿಂದ ಅದೇ ಕಲಮಿನ ಪಟ್ಟಿಯು ನನ್ನ ಮೇಲಾದ್ದರಿಂದ ನನಗೊಂದು ಸನ್ಮಾನವೆಂದು ತಿಳಿಯುವೆನು. ನಾನು ಯಾವ ಅಧಿಕಾರದ ವ್ಯಕ್ತಿಯ ದ್ವೇಷವನ್ನೂ ಮಾಡುವದಿಲ್ಲ. ಅಂದ ಬಳಿಕ ಬಾದಶಹರ ದ್ವೇಷ ಎಲ್ಲಿಂದ ಬರುವದು? ಈ ಪದ್ಧತಿಗಿಂತ ಹೆಚ್ಚಾದ ಯಾವ ಅಹಿತವೂ ಮೊದಲು ಆಗಿರಲಿಲ್ಲ. ಅದ್ದರಿಂದ ಈ ಪದ್ಧತಿಯ ವಿಷಯವಾಗಿ ಅಪ್ರೀತಿಯನ್ನು ಧರಿಸುವದು ಸದ್ಗುಣವೆಂದು ನಾನು ತಿಳಿಯುವೆನು. **ಈ ವಿಶ್ವಾಸದಿಂದಲೇ ನಾನು**

ಈ ರಾಜ್ಯ ಪದ್ಧತಿಯ ಮೇಲೆ ಪ್ರೇಮಮಾಡುವದು ಪಾಪವೆಂದು ತಿಳಿಯುವೆನು.

ಅಂತೇ ಆರೋಪಿಸಲ್ಪಟ್ಟ ಲೇಖಗಳಿಂದ ನನ್ನ ಸನ್ಮಾನವೆಂದು ತಿಳಿದುಕೊಳ್ಳುವೆನು. ಹಿಂದುಸ್ಥಾನ ಹಾಗೂ ಇಂಗ್ಲಂಡದ ಅಸ್ವಾಭಾವಿಕ ಬಂಧನದಿಂದ ಹೊರಗಾಗಲು ಅಸಹಕಾರಿತೆಯೊಂದೇ ಮಾರ್ಗವು. ಇದನ್ನು ತೋರಿಸಿಕೊಟ್ಟು ನಾನು ಈ ಎರಡೂ ದೇಶಗಳ ಸೇವೆ ಮಾಡಿರುವೆನು. ಅಪಾಯಕ್ಕೆ ಪ್ರತ್ಯಪಾಯವೆಂದು ಅಸಹಕಾರಿತೆಯ ಅರ್ಥವು ಹೊದಲಿತ್ತು, ಅತ್ಯಾಚಾರದ ಅಸಹಕಾರದಿಂದ ದುಃಖಗಳು ಹೆಚ್ಚಾಗುವವು. ದುಃಖಗಳಿಗಾಧಾರವು ಅತ್ಯಾಚಾರವು. ಅದುನಾಶವಾದರೆ ದುಃಖವು ನಾಶವಾಗುವದು. ಇದನ್ನೇ ನನ್ನ ದೇಶಬಾಂಧವರಿಗೆ ತಿಳಿಸಿರುವೆನು. ದುಷ್ಟ ಪದ್ಧತಿಯೊಡನೆ ಅಸಹಕಾರವೆಂದರೆ ಅದ ಶಿಕ್ಷೆಯನ್ನು ಅನುಭವಿಸಲು ಸಿದ್ಧವಾಗುವದೇ ಅನತ್ಯಾಚಾರ ವೃತ್ತಿಯು. ಯಾವ ಕೃತ್ಯಕ್ಕೆ ನಿಮ್ಮ ಕಾಯಿದೆಯು ಬೇಕೆಂತಲೇ ಮಾಡಿದ ಅಪರಾಧವೆನ್ನುವದೋ, ಅದಕ್ಕೆ ನಾನು ನಾಗರಿಕರ ಕರ್ತವ್ಯವೆಂದು ತಿಳಿಯುವೆನು. ಇಂಥ ಕೃತ್ಯಕ್ಕೆ ಕಠಿಣತರವಾದ ಶಿಕ್ಷೆಯನ್ನು ಕೊಡಿರೆಂದು ನಾನು ಕೋರ್ಟಿಗೆ ಹೇಳಿಕೊಳ್ಳುವೆನು. ಅದನ್ನು ಸಹಿಸಲು ಆನಂದದಿಂದೊಪ್ಪುವೆನೆಂದು ಕೋರ್ಟಿಗೆ ಹೇಳುವೆನು. ಅದ್ದರಿಂದ ನ್ಯಾಯಮೂರ್ತಿಗಳೇ! ಅಸೇಸರರೇ! ನಾನು ನಿಜವಾಗಿಯೂ ನಿರ್ದೋಷಿಯಿದ್ದು, ನೀವು ಕೈಕೊಂಡ ಕಾಯಿದೆಯು ದುಷ್ಟವದೆಯೆಂಬ ನಿಮ್ಮ ವಿಶ್ವಾಸವಿದ್ದರೆ, ನೀವು ನಿಮ್ಮ ನಿಮ್ಮ ಸ್ಥಳಕ್ಕೆ ರಾಜೀನಾಮೆಯನ್ನು ಕೊಡಿರಿ. ದೋಷದಿಂದ ಮುಕ್ತರಾಗಿರಿ. ಇಲ್ಲದಿದ್ದರೆ ಯಾವ ಕಾಯಿದೆಯ ಆಧೀನಕ್ಕೊಳಗಾಗಿರುವಿರೋ ಆ ಕಾಯಿದೆಯು ಒಳಿತೆಂತಲೂ, ನನ್ನ ಹೇಳಿಕೆಯು ಅಹಿತವೆಂತಲೂ ನಿಮ್ಮ ಅಭಿಪ್ರಾಯವಿದ್ದರೆ ನನಗೆ ತಾವು ಕಠಿಣತರವಾದ ಶಿಕ್ಷೆಯನ್ನು ವಿಧಿಸಿರಿ.

* * * * *

ಮಹಾತ್ಮರ ಪುಟ್ಟಸಂದೇಶ.

—o—

ನವಜೀವನ ಪ್ರಕಾಶಕರು ಬೆಟ್ಟಿಗೆ ಹೋದಾಗ್ಗೆ ಮಹಾತ್ಮರು ಹೇಳಿದ್ದೇನೆಂದರೆ—

ನೀವು ನನ್ನ ಕಡೆಗೆ ಖಾದಿಯನ್ನು ಕೊಟ್ಟರೆ ನಾನು ನಿಮಗೆ ಸ್ವರಾಜ್ಯ ಕೊಡುವೆನು. ಇದರಲ್ಲಿಯೇ ಅಂತ್ಯಜರ ಉದ್ಧಾರವೂ ಕೂಡಿಹೋಗಿದೆ. ಹಿಂದೂ ಮುಸಲಮಾನರ ಐಕ್ಯವೂ ಖಾದಿಯಿಂದಲೇ ಸ್ಥಿರವಾಗುವದು. ಶಾಂತಿಗೂ ಅದೊಂದು ಪ್ರಬಲವಾದ ಆಸ್ಥಾಧಾರವು. ಅಂದರೆ ನಾನು ಕೋರ್ಟು- ಕೌನ್ಸಿಲುಗಳ ಬಹಿಷ್ಕಾರವನ್ನಪೇಕ್ಷಿಸುವದಿಲ್ಲವೆಂತಲ್ಲ. ಆದರೆ ಹೋಗುವವರ ದ್ವೇಷವನ್ನು ಬೆಳೆಯಿಸಬಾರದು. ಅವರ ಸಹಾಯದಿಂದಲೇ ಖಾದಿಯ ಪ್ರಸಾರ ಮಾಡಬೇಕು. ಮವಾಳರನ್ನೂ ಸಂತೋಷಗೊಳಿಸಬೇಕು. ಅವರು ನಿರ್ಭಯರಾದರೆಂದರೆ ನಮ್ಮ ವಿರುದ್ಧ ವರ್ತಿಸಲಾರರು. ಇದೇ ಮಾತು ಇಂಗ್ಲೀಷರಿಗೂ ಉಪಯೋಗವಾಗುವದು.

ಜವಾಬುಕೊಡುವ ಪೂರ್ವದಲ್ಲಿ ಮಹಾತ್ಮರ ಭಾಷಣ.

—(o)—

ನನ್ನ ವಿಷಯವಾಗಿ ವಿದ್ವದ್ವರ್ಯ ಅಡ್ವೊಕೇಟ ಜನರಲರು ಯಾವ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರೋ ಅದು ನನಗೆ ಮಾನ್ಯವದೆ. ಅವರ ಉದ್ಗಾರಗಳಲ್ಲಿ ನನ್ನ ವಿಷಯವಾದ ಉದ್ಗಾರಗಳು ಒಂದೂ ಅಯೋಗ್ಯವಾಗಿಲ್ಲ. ಸದ್ಯದ ರಾಜ್ಯಪದ್ಧತಿಯ ವಿಷಯವಾಗಿ ಅಪ್ರೀತಿಯುತ್ಪನ್ನವಾಗುವ ಉಪದೇಶಮಾಡುತ್ತಿರುವದು ಸತ್ಯವದೆ. ಇದನ್ನು ನಾನು ನ್ಯಾಯಾಧೀಶರ ಮುಂದೆ ಮುಚ್ಚಿಡುವದಿಲ್ಲ. ಯಂಗಇಂಡಿಯಾದಿಂದಲೇ ನಾನು ಹೀಗೆ ಮಾಡುತ್ತಿರುವೆನೆಂತಲ್ಲ; ಅದಕ್ಕೂ ಪೂರ್ವದಿಂದಲೂ ಮಾಡುತ್ತಿರುವೆನು. ಎಂದು ಹೇಳಿದ್ದೂ ನಿಜವದೆ. ನನ್ನ ಮೇಲಿನ ಭಾರವನ್ನರಿತೇ ನಾನು ಅಪ್ರಿಯವಾದ ಈ

ನನ್ನ ಕರ್ತವ್ಯವನ್ನು ಮಾಡುತ್ತಲಿದ್ದೇನೆ. ಮುಂಬೈ ಇಲಾಖೆಯಲ್ಲಿ ಪೋಲೀಸರಿಂದಾದ ಅತ್ಯಾಚಾರ ಸಂಬಂಧದಿಂದ ಅಡವ್ಹೋಕೇಟರು ಹೊರಸಿದ ನೋಟೀಸಕ್ಕೆ ನಾನು ಪಾತ್ರನು. ರಾತ್ರಿಯಲ್ಲೆಲ್ಲ ಪುನಃ ಪುನಃ ಈ ವಿಷಯವಾಗಿ ವಿಚಾರಮಾಡಿದೆನು. ನನ್ನ ಮನಸಿನ ಕಡೆಗೂ ಲಕ್ಷ್ಯಗೊಟ್ಟೆನು. ಕಡೆಗೆ ಅತ್ಯಾಚಾರ ಸಂಬಂಧವು ನನಗಿಲ್ಲವೆಂದು ಅಷ್ಟಲು ನನ್ನ ಮನಸು ಒಡಂಬಡಲಿಲ್ಲ. ನನಗೆ ಶಿಕ್ಷಣ ಹಾಗೂ ಅನುಭವವಿದೆ. ನನ್ನ ಕೃತ್ಯದ ಪರಿಣಾಮವೇನಾಗುವದೆಂಬ ಅರಿವು ನನಗಿರಬೇಕೆಂದು ಅಡ್ವೊಕೇಟರೆನ್ನುತ್ತಾರೆ. ಅಹುದು ನಾ ನು ಪ ರಿ ಣಾ ಮ ವ ನ್ನ ರಿ ತಿ ದ್ದೆ ನು. ನಾನು ಬೆಂಕಿಯೊಡನೆ ಆಟವನ್ನು ಹೂಡಿದ್ದೆನು.

ನಾನು ಮುಕ್ತನಾದರೇ ಅದನ್ನೇ ಪುನಃ ಮಾಡುವೆನು. ಹಾಗೆ ಮಾಡದಿದ್ದರೆ ನಾನು ಕರ್ತವ್ಯಚ್ಯುತನಾಗುವೆನು. ನಾನು ಇಷ್ಟು ಹೇಳದಿದ್ದರೂ ಕರ್ತವ್ಯಭ್ರಷ್ಟನಾಗುತ್ತಿದ್ದೆನು. ಯಾವ ರಾಜ್ಯಪದ್ಧತಿಯು ನನ್ನ ದೇಶದ ತುಂಬಿಬರದಂಥ ಹಾನಿಯಾಯಿತೋ ಆ ರಾಜ್ಯಪದ್ಧತಿಗೆ ತಲೆಬೊಗ್ಗಿಸುವದು, ಅಥವಾ ಸಖ್ಯವು ಗೊತ್ತಾದನಂತರ ನನ್ನ ದೇಶಬಾಂಧವರ ತಲೆತಿರುಕತನಕ್ಕೆ ತಲೆಗೊಡುವದು ಇವೆರಡರಲ್ಲಿ ಯಾವದೊಂದು ಮಸಿಸಲಿಕ್ಕೇಬೇಕು. ಹೀಗಿದ್ದರೂ ಅಸತ್ಯಾಚಾರತನವೇ ನನ್ನ ತತ್ವವು. ಆಗಾಗ ನಡುನಡುವೆ ಜನರು ಅತ್ಯಾಚಾರ ಮಾಡಿದರು. ಅಂತೇ ನಾನು ಶಿಕ್ಷೆ ಭೋಗಿಸಲು ಸಿದ್ಧನಾಗಿದ್ದೇನೆ ನ್ಯಾಯಾಧೀಶರು ಯಥಾ ಪ್ರಕಾರ ಕಾಯಿದೆಯು ಅನ್ವಯದ ನಡೆಯಿಸಬೇಕು. ಅಥವಾ ತಮ್ಮ ಸ್ಥಳಕ್ಕೆ ರಾಜೀನಾಮೆಯನ್ನಿತ್ತು ನನ್ನಂತೆ ಸರಕಾರ ವಿಷಯವಾಗಿ ಅಪ್ರೀತಿಯುತ್ಪನ್ನವಾಗುವ ಉಪದೇಶ ಮಾಡಬೇಕು. ನಾನು ನನ್ನ ಲೇಖೀ ಜವಾಬನ್ನು ಓದಿದ ಒಳಿಕ ಈ ಹೊತ್ತಿಗೆ ನನ್ನ ಅಂತಃಕರಣದಲ್ಲಿ ಏನು ನಡೆದದೆಯೆಂಬುದು ನ್ಯಾಯ ಮೂರ್ತಿಗೆಗೊತ್ತಾಗುವದು.

ಒಬ್ಬ ಹವಾಲದಾರನ ಮರಣ; ಸಿಪಾಯರ ಗಾಯ.

——೦——೦——

ವಾರ್ತೋನಿಯರವು ಕೆಳಗಿನ ಸಂಗತಿಯನ್ನು ಪ್ರಸಿದ್ಧಿಸಿರುತ್ತದೆ.

ಸರಹದ್ದಿಯ ಶಾಂತತೆಯು ಪುನಃ ಕೆಡುವ ಸಂಭವವದೆ. ವಾಣಾದಲ್ಲಿ ಐವೇಸೆಯುವ ಲೂಟಮಾಡಿ ೧೯ ಸಾವಿರ ರೂ. ಗಳ ವಸ್ತುವನ್ನು ಇನ್ನೂರು ಮಹೇದೀ ಜನರು ಎಬ್ಬಿಸಿದರು. ಈ ಗೊಂದಲದಲ್ಲಿ ಒಬ್ಬ ಹವಾಲದಾರನೂ ಸತ್ತನು. ಇಬ್ಬರು ಸಿಪಾಯರಿಗೆ ಗಾಯವಾಯಿತು.

ಪೋಲೀಸರ ಬೆನ್ನು ಛಪ್ಪರಿಸಿದರು.

——೦——

ಕಡತದ ಯಾವ ಭಾಗದ ವಸ್ತುಯು ಕಡಿಮೆ

ಅಮೂಲ್ಯ ಸಂಧಿ!

ಆತಂಕನಿಗ್ರಹ ಮಾತ್ರೆಗಳು.

ಅತ್ಯುತ್ತಮ ಸಂಧಿ!

ಅಜೀರ್ಣವನ್ನು ಹೋಗಲಾಡಿಸಿ, ಶುಭ್ರವಾದ ರಕ್ತವನ್ನುಂಟು ಮಾಡಿ ದೇಹವನ್ನೂ, ಬುದ್ಧಿ ಇತ್ಯಾದಿಗಳನ್ನೂ, ಅಭಿವೃದ್ಧಿ ಪಡಿಸುವದಲ್ಲದೆ, ಸಾವಿರಾರು ಜನರು ಅನುಕೂಲ ಗುಣಗಳನ್ನು ಹೊಂದಿದುವರು. ಒಂದು ರೂಪಾಯಿ ಕೊಟ್ಟು ಈ ಎಲ್ಲ ಅನುಭವಗಳನ್ನು ಪಡೆಯಬಹುದು. ಇದಲ್ಲದೆ ನಮ್ಮ ಇತರ ಅಂದರೆ ಸಕಲವಾದ ಔಷಧಿಗಳ ಹೆಸರು ತಿಳಿಸುವದಕ್ಕಾಗಿ ಈ ಕೆಳಗಿನ ಅಡ್ರೇಸಿಗೆ ಬರೆಯುವಲ್ಲಿ ತಿಳುಹಿಸುವೆವು.

ನಮ್ಮ ವಿಳಾಸ—

ಆತಂಕನಿಗ್ರಹ ಔಷಧಾಲಯ,

೨೬ ಧ್ರುಕ್ಷಿ ಮದ್ರಾಸು.

... ನ್ನ ದಂಗೆಯಾಗಬೇಡೆಂಬ ಕಲ್ಪನೆಯು ಸಹ ಇರಲಿಲ್ಲ ಪೂರ್ವ ಅಲ್ಲಿಯೇ ದಂಗೆಯಾಯಿತು. ೧೩ನೇ ತಾರೀಖಿನ ದಿವಸ ೧೦-೧೧ರ ನಡುವೆ ಹೋದ ಸಾರ್ಜಂಟ ಹಾಗೂ ಇಬ್ಬರು ಸ. ಇ. ರಿಂದ ತಪ್ಪಾಯಿತೆಂದು ಮಿ. ಪಿಲೆ ಹಾಗೂ ಕಿಪಲೆ ವರೆನ್ನುವರು. ಇದು ನಿಜವಿದ್ದರೂ ಪೋಲೀಸರು ಯೋಗ್ಯ ಕಾರ್ಯ ಮಾಡಿದರೆನ್ನಬಹುದು. ಎಂಬದಾಗಿ ಮದ್ರಾಸ ಸರಕಾರದವರು ಪ್ರೆಸ ನೋಟ ಹೊರಡಿಸಿ, ಯುವರಾಜರ ಆಗಮನ ಪ್ರಸಂಗದಲ್ಲಾದ ಮದ್ರಾಸ ದಂಗೆಯ ಸಂಬಂಧದಲ್ಲಿ ಪೋಲೀಸರ ಬೆನ್ನು ಛಪ್ಪರಿಸಿದರು.

ವಿಜಯದ ವರ್ಗಣೀದರ.

ನಿತ್ಯಪತ್ರಕ್ಕೆ	೧೨	ತಿಂಗಳಿಗೆ	೧೨-೮-೦ ರೂ.
”	೬	”	೭-೦-೦ ರೂ.
”	೩	”	೪-೦-೦ ರೂ.
”	೧	”	೧-೮-೦ ರೂ.

ವಾರಪತ್ರಕ್ಕೆ ವಾರ್ಷಿಕ ವರ್ಗಣಿ ೩-೧೨-೦ ರೂ.

ವಿಶೇಷಮಾಹಿತಿ ಕೆಳಗಿನ ವಿಳಾಸಕ್ಕೆ.

ಮ್ಯಾ. ವಿಜಯ

ನೋಟೀಸಿನದರಗಳು.

ತಿಂಗಳಕಾಲದ ಎಂಟುವಳಿಗಳಿಗೆ ಒಂದೂಕಾಲ ರೂಪಾಯಿ; ಮುಂದೆ ಪ್ರತಿಯೊಂದು ವಳಿಗೆ ಎರಡುಆಣೆ; ಇಂಗ್ಲಿಷ ಪ್ರತಿಯೊಂದು ವಳಿಗೆ ಆರು ಆಣೆ ಇಂಗ್ಲಿಷದಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ಏಳು ಆಣೆ. ಹೆಚ್ಚು ಕಾಲದ ಒಳಗಳಿಗೆ ವಿಶೇಷ ಕಡಿಮೆ ದರಗಳನ್ನು ಕೊಡುವೆವು ಕೆಳಗಿನವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು. ಮ್ಯಾ. ವಿ. ಧಾರವಾಡ.

ವಕೀಲ ಹಾಗೂ ಪಕ್ಷಗಾರರಿಗೆ

ಉಪಯುಕ್ತ

ದರಖಾಸ್ತ ಫಾರ್ಮ, ವಕೀಲ ಪತ್ರ

ಎಂಡಾರ್ಸಮೆಂಟ ಪತ್ರಿಕೆಗಳು

ಯೋಗ್ಯದರದಿಂದ ಸಿಕ್ಕುವವು.

“ ವಿ ” ಮ್ಯಾನೇಜರ ವಿಜಯ ಧಾರವಾಡ.

ಉತ್ತಮ ತರದ ಮಾಲು ಕ್ರಯ ಸುಲಭ

——೦——

ಮಕ್ಕಳ ಆಟದಹಿತ್ತಾಳೆಯ ೩೨ ಸಾಮಾನುಗಳು ಸಣ್ಣ ಸಟ್ಟು ೧ಕ್ಕೆ ರೂ ೧-೪-೦ ಮಧ್ಯಮ ೩-೦-೦ ಉತ್ತಮ ಪಾ ೪-೮-೦ ದೊಡ್ಡದು ೫-೦-೦ ಪೋಸ್ಟ ಖರ್ಚ ಬೇರೆ ಮತ್ತು ಕಾಶಿಯಲ್ಲಿ ತಯಾರಾಗುವ ರೇಶ್ಮೆ ಮಡಿ ಜರಿ ಸಾಮಾನು ರುದ್ರಾಕ್ಷಿ ಕಣ ಕಂಠೀರ ತುಲಸಿ ರುದ್ರಾಕ್ಷಿ ಶ್ರೀಚಕ್ರ, ಸ್ಫಟಿಕ ಮಣಿ, ಲಿಂಗಧಾರಣ ಮುಂತಾದವುಗಳನ್ನು ಕೋರುವವರಿಗೆ ವ್ಹಿ. ಪಿ. ಮೂಲಕ ಕಳುಹಿಸಲಾಗುವದು ಕ್ಯಾಟಲಾಗು ಉಚಿತ.

ವಿಳಾಸ:— ಎಸ್ ಹಚ ನಾರಾಯಣದಾಸ ಮತ್ತು ಕಂಪನಿ, ಚೌಕಂಬಾ ಕಾಶಿಕ್ಷೇತ್ರ

ಕನ್ನಡ ಗದಗಿನಲ್ಲಿ ಪಿ.ಎಂ. ಅಕ್ಕಯಕೊಂಡಿ ಸಾಹಿತ್ಯಕ, ರಾಜಕೀಯ, ನೈತಿಕ, ಧಾರ್ಮಿಕ, ವಿಷಯಗಳನ್ನು ಪ್ರತಿಪಾದಿಸುವ.

ಕರ್ನಾಟಕ ಸಿಂಹ.

—೦—

ಹೊಸ ಕನ್ನಡ ವಾರ ಪತ್ರಿಕೆಯು.

ಮುಂಗಡ ವರ್ಗಣಿ — ಪತ್ಯೇಕ ಪ್ರತಿ

ರೂ. ೩-೦-೦ — ರೂ. ೦-೧-೩-

ಏಪ್ರಿಲದಿಂದ ಮೂರು ತಿಂಗಳ ಒಳಗಾಗಿ ಹೊರಡುವದು. ಮೇಲೆ ವಿವರಿಸಿದ ವಾರಪತ್ರಿಕೆಯು ಬಾಲ್ಯದಿಂದ ಭಾಷಾಸೇವೆಯನ್ನು ಮಾಡುತ್ತಿದ್ದ ಮತ್ತು ಮೈಸೂರ ಹಾಗು ಧಾರವಾಡ ಕರ್ನಾಟಕ ವಿದ್ಯಾವರ್ಧಕಸಂಘದಿಂದ ಬಹುಮಾನಗಳನ್ನು ಪಡೆದ ಮಿ|| ಅಚ್ಯುತರಾವ ಕೃಷ್ಣರಾವ ಕುಲಗೋಳ ಇವರ ಸಂಪಾದಕತ್ವದ ಕೆಳಗೆ ಹೊರಡುವದು. ಬಾಲವೃದ್ಧರಿಗೆ ತಿಳಿಯುವಂಥ ತಿಳಿಗನ್ನಡ ಭಾಷೆಯಲ್ಲಿ ಬರೆದ ಲೇಖಗಳನ್ನು ಅದರಲ್ಲಿ ಕೊಡುವೆವು. ಗ್ರಾಹಕರು ತಮ್ಮ ಸಂಪೂರ್ಣ ಹೆಸರನ್ನು ಕೆಳಗಿನ ವಿಳಾಸಕ್ಕೆ ಬೇಗನೆ ತಿಳಿಸಬೇಕಾಗಿ, ಸವಿನಯ ವಿನಂತಿ ಇರುತ್ತದೆ.

ವಿಳಾಸ:— ಶಾಂತಪ್ಪಾ ಸಿದ್ದೋನೆಪ್ಪಾ ಬಲಗುಂದ ಮಾಲಕ ಸೈಮನ್ ಪೆ.ಸ ಗದಗ ಜಿ. ಧಾರವಾಡ

* * * * *

ನೋಟೀಸು.

ಹಾವೇರಿ ಮುನಸಿಪಾಲಿಟಿ ಕಚೇರಿಯಿಂದಾ ಸೂವತ್ರ್ತು ಜನರಿಗೆ ತಿಳಿಸುವದೇನಂದರೆ—

ಹಾವೇರಿ ಮುನಸಿಪಾಲಿಟಿ ಹದ್ದಿಯಲ್ಲಿ ಈ ಮುನಸಿಪಾಲಿಟಿ ನೇಮಗಳ ಅನುಸರಿಸಿ ಟೋಲಕರಾ ವಸೂಲ ಮಾಡುವ ಕೆಲಸವನ್ನು ತಾರೀಖು ೧ ಏಪ್ರಿಲ ೧೯೨೨ ರಿಂದಾ ತಾರೀಖು ೩೧ ನೇ ಮಾರ್ಚ ೧೯೨೩ ರ ವರಿಗೆ ಎರಡೂ ದಿವಸಗಳು ಸಹಿತ ಒಂದು ವರ್ಷದ ಮಟ್ಟಿಗೆ ಮಕ್ತೆಯಿಂದ ಕೊಡತಕ್ಕದ್ದದೆ. ಮಕ್ತೆಯಿಂದಾ ಹಿಡಿಯಲಪೇಕ್ಷಿಸುವ ಕಂಟ್ರಾಕ್ಟರ ಜನರು ತಮ್ಮ ಲಾಯಖಿ ಸರಟೀಫಿಕೇಟ ಸಹಿತ ತಾರೀಖು ೨೮ ನೇ. ಮಾರ್ಚ ೧೯೨೨ ನೇ ಇಸವಿಯ ದಿವಸ ಸಂಜೆ (೫) ಘಂಟೆ ವೇಳಗಾಗಿ ಕೆಳಗೆ ಸಹಿ ಮಾಡಿದವರ ಕಡೆಗೆ ಮುಟ್ಟುವಂತೆ ಟೆಂಡರಗಳನ್ನು ಕಳುಹಿಸಬೇಕು. ಹೆಚ್ಚಿಗೆ ಅಗರ ಕಡಿಮೆ ರಕಮಿನ ಟೆಂಡರ ಮಂಜೂರ ಮಾಡುವದು ಅಗರ ಬಿಡುವದು ಮುನಸಿಪಾಲಿಟಿಯವರ ಮರ್ಜಿ ಮೇಲೆ ಅದೆ ಟೆಂಡರ ಮಂಜೂರ ಆದ ಕೂಡಲೆ ಮಂಜೂರ ರಕಮಿನ ¼ ಹಣಾ ಡಿಪಾಜಿಟ್ಟ ಇಡಬೇಕಾಗುವದಲ್ಲದೆ ಟೆಂಡರಿನ ರಕಮಿನಬಗ್ಗೆ ಜಾಮೀನು ಸಹಾ ಕೊಡಬೇಕಾಗುವದು ಟೋಲ ರೂಲ್ಸುಗಳು ಮುನಸಿ ಪಾಲಿಟಿ ಆಫೀಸಿನಲ್ಲಿ ಆಫೀಸ ವೇಳೆಯಲ್ಲಿ ನೋಡಲಿಕ್ಕೆ ಸಿಗುವದು ತಿಳಿಯುವದು.

ಹಾವೇರಿ — B. C. Chokki

೨೧-೩-೨೨ — ಹಾವೇರಿ ಮುನಸಿಪಾಲಿಟಿ.

ಅಪೂರ್ವ — ಅಲಭ್ಯ — ಪ್ರೇಕ್ಷಣೀಯ

ಫಡಕೆ ಇವರ ಚಿತ್ರಕಲಾ ಪ್ರದರ್ಶನ

ಮುಂಬಯಿ, ಮೈಸೂರ, ಮದ್ರಾಸ, ಬಡೋದಾ ವಗೈರೆ ಪ್ರದರ್ಶನದಲ್ಲಿ ಬಂಗಾರ ಹಾಗೂ ಬೆಳ್ಳಿಯ ಪದಕಗಳನ್ನು ದೊರಕಿಸಿದಂಥ ಹಿಂದುಸ್ಥಾನದೊಳಗಿನ ಪ್ರಸಿದ್ಧ ಚಿತ್ರಕಾರರಾದ ಶ್ರೀ. ಫಡಕೆ ಇವರು ತಯಾರ ಮಾಡಿದ ಮೇಣದ ಹಾಗು ಪ್ಲಾಸ್ಟರದ ಸಜೀವ ಚಿತ್ರಗಳ ಶಿಲ್ಪಕಲೆಯ ಅತ್ಯುತ್ತಮವಾದ ಜಂಗೀ ಪ್ರದರ್ಶನವು.

ಕೇವಲ ಜನರ ಆಗ್ರಹದ ಸಲುವಾಗಿ ಈ ಪ್ರದರ್ಶನವನ್ನು ಹುಬ್ಬಳ್ಳಿಯ ದುರ್ಗದ ಬೈಲಿನಲ್ಲಿ ಮಿ. ಮಹೇಂದ್ರಕರ ಫೋಟೋಗ್ರಾಫರ ಇವರ ಮನೆಯ ಮುಂದೆ ತೆರೆಯಲ್ಪಟ್ಟದೆ.

ಇದರಲ್ಲಿ ಕೈಲಾಸವಾಸಿ ಲೋಕಮಾನ್ಯ ಟಿಳಕ ಮತ್ತು ಮಹಾತ್ಮಾ ಗಾಂಧಿ ಮುಂದಾಳುಗಳ ಅಗದೀ ಹುಬೇಹೂಬ ಹಾಲ ಚಾಲ ಮಾಡುವ ಚಿತ್ರಗಳು ಇದ್ದು ಎರಡನೇ ದೇವತೆಗಳ ಮೂರ್ತಿಗಳನ್ನು ಪ್ರದರ್ಶನದಲ್ಲಿ ಇಡುವದರಲ್ಲಿ ಬಂದಿದೆ.

ಆದ್ದರಿಂದ ಇಲ್ಲಿಯ ರಸಿಕ ಹಾಗು ಗುಣಜ್ಞ ನಾಗರೀಕರು ಈ ಅಪೂರ್ವಸಂಧಿಯ ಉಪಯೋಗ ಮಾಡಿಕೊಳ್ಳುವರೆಂಬ ನಂಬಿಗೆಯದೆ.

ದುರ್ಗದಬೈಲರೋಡ ಹುಬ್ಬಳ್ಳಿ — ಮ್ಯಾನೇಜರ

೫-೩-೨೨ — ಫಡಕೆ ಚಿತ್ರಕಲಾ ಪ್ರದರ್ಶನ

ಓದಿರಿ! — ಓದಿರಿ!! — ಓದಿರಿ

ಅದು, ತರುಹಿರಿ! — **ನಭೂತೋನಭವಿಷ್ಯತಿ** — ಅದು, ತರುಹಿರಿ!

ಹಾಪಸಮುಕ್ತರಾಗಿರಿ. ಸುಖಿಗಳಾಗಿರಿ.

ಪುಸ್ತಕಗಳು ಅಚ್ಚು ಆಗುತ್ತವೆ. — ಶ್ರೀ ಸಾಧು ಶಿರೋಮಣಿ — ಬೇಗ ಕೊಳ್ಳಿ

ಸಿದ್ಧಪ್ಪನವರ ಚರಿತ್ರೆಯು.

ಈ ಮಹಾಮಹಿಮರು ಶಿವಾಧೀನರಾದ ೧೦ ತಿಂಗಳೊಳಗಾಗಿಯೇ ಇವರ ಮಹಿಮೆಯು ದಿಕ್ತಟಗಳಲ್ಲೆಲ್ಲ ವ್ಯಾಪಿಸಿರುವದು. ಹುಬ್ಬಳ್ಳಿ ತಾಲೂಕು ಉಣಕಲ್ಲ ಗ್ರಾಮದಲ್ಲಿ ಇವರ ಸಮಾಧಿಸ್ಥಳವಿರುವದು. ಇಂಥ ಚಮತ್ಕಾರಗಳನ್ನು ಕಲಿಯುಗದಲ್ಲಿ ಕಾಣುವದು ಅಪರೂಪ. ಇವರು ಶಿವಾಧೀನರಾಗುವ ಕಾಲವನ್ನು ೨೨ ದಿವಸ ಮುಂಚೆಯೇ ತಮ್ಮ ಭಕ್ತ ಜನರಿಗೆಲ್ಲ ಸಾರಿ ಹೇಳಿದ್ದರು.

ಪ್ರತಿ ಸೋಮವಾರ, ಗುರುವಾರಗಳಲ್ಲಿ ಅಗಣಿತ ಜನ ಸಮುದಾಯವು ಉಣಕಲ್ಲಿಗೆ ಬಂದು ಅವರ ಸಮಾಧಿ ದರ್ಶನ ತೆಗೆದುಕೊಂಡು ಹೋಗುವದು. ಭಕ್ತಜನರು ಕೇವಲ ದುಡ್ಡು ಎರಡು ದುಡ್ಡುಗಳಂತೆ ಸಮಾಧಿಯ ಮುಂದಿಟ್ಟ ಹಣವೇ ಐದಾರು ಸಾವಿರ ರೂಪಾಯಿಗಳವರೆಗೆ ಕೂಡುವದು. ಮನುಷ್ಯರಷ್ಟೇ ಅಲ್ಲ ಪಶು ಪಕ್ಷಿಗಳು ಸಹ ಅವರ ಸಮಾಧಿಗೆ ನಡಕೊಳ್ಳುತ್ತಿರುವವು.

ಇಂಥ ಸಾಧುವರ್ಯರ ಮಹಿಮೆಯು ಸರ್ವತ್ರ ಪ್ರಸಿದ್ಧವಾಗಿ ಎಲ್ಲರಿಗೂ ಉಪಯೋಗವಾಗಬೇಕು. ಎಂಬ ಸದ್ಭಾವನೆಯಿಂದಲೇ ನಾವು ಅವರ ಚರಿತ್ರೆಯನ್ನು ಅನೇಕ-ವಿದ್ವಜ್ಜನರ ಸಹಾಯದಿಂದ ಸಂಗ್ರಹಿಸಿ ಇಪತ್ತೆಂಟನೇ-ಸೋತ್ರ ದ ಅವರ ಎಲ್ಲ ಮಹಿಮೆಗಳನ್ನು ಸೇರಿಸಿ. ಅವರ ಸುಂದರವಾದ "ಫೋಟೋ"ವನ್ನು ಕೊಟ್ಟು ಪುಸ್ತಕ ಬರೆಯುವೆವು. ಅದರ ಬೆಲೆ ಕೇರ ಕಡಿಮೆ. ಅಂದರೆ ಹತ್ತೇ ಆಣೆ ಇಟ್ಟಿರುವೆವು. ಅಂಚೆಯ ವೆಚ್ಚ ಬೇರೆ. ಬೇಗ ನೋಡು.

ಎಲ್ಲ ಕನ್ನಡಿಗರು ಈ ಪುಸ್ತಕವನ್ನು ಕರಿಸಿಕೊಂಡು ತಮ್ಮ ನಿಜವಾದ ಲಾಭವನ್ನು ಮಾಡಿಕೊಂಡರೆ ನಮ್ಮ ಶ್ರಮದ ಸಾಫಲ್ಯವಾಯಿತೆಂದು ತಿಳಿಯುವೆವು.

ಇವರ ಚರಿತ್ರೆಯನ್ನು ಅನೇಕ ಜನರು ಬರೆದಿರುವರು. ಆದರೆ ಕೇವಲ ಧಾರ್ಮಿಕ-ಬುದ್ಧಿಯಿಂದ ಸ್ವಾರ್ಥಾಪೇಕ್ಷೆಯಿಲ್ಲದೆ, ಸಾಧನಸಾಹಿ ವಿಷಯ ಸಂಗ್ರಹಮಾಡಿದ ಈ ಪುಸ್ತಕವು ಅತ್ಯುಪಯುಕ್ತವಾದದ್ದು.

ಕುರುಡರು, ಕುಂಟರು, ಮಕ್ಕಳಿಲ್ಲದವರು, ನಾನಾತರದ ಬೇನೆಯಿಂದ ಬಳಲುವವರು ಈ ಪವಿತ್ರ ಪುರುಷರ ಸಮಾಧಿಗೆ ನಡಕೊಂಡರೆ ಸಾಕು. ಅವರ ರೋಗವೆಲ್ಲ ಪರಿಹಾರವಾಗಿ ತಮ್ಮ ಅಭೀಷ್ಟವನ್ನು ಪೂರ್ತಿಮಾಡಿಕೊಳ್ಳುವರು. ಇಂತು ಲಾಭಮಾಡಿಕೊಂಡವರ ಉದಾಹರಣಗಳು ಲಕ್ಷಾಂತರ ಇರುವವು.

ಈ ಚರಿತ್ರೆಯಲ್ಲದೆ ನಮ್ಮಲ್ಲಿ ಎಲ್ಲ ತರದ ಕಥೆ ಕಾದಂಬರಿಗಳೂ, ಪಾರಲೋಕಉಪಯೋಗೀ ಪುಸ್ತಕಗಳೂ, ಇತರ ಪುಸ್ತಕಗಳೂ, ಏಕ್ಸರಸಾಯಿಜುಗಳೂ ಸಿಗುವವು. ಸಿಂಬಾಳಕರಚ್ಚಿತ ಎಲ್ಲ ಪುಸ್ತಕಗಳೂ ಸಿಗುವವು.

ಎ. ಆರ್. ಸಿವನಾಗಪ್ಪಾ ಹಾಗ್ಗಿದಾಸ

೧೯-೩-೨೨ — ಹುಬ್ಬಳ್ಳಿ.

ಈ ಪತ್ರವನ್ನು ಸತ್ಯಬೋಧ ರಾಮಚಂದ್ರ ಅಡಬಿಟ್ಟಿ ಇವರು ಧಾರವಾಡದಲ್ಲಿ ತಮ್ಮ ವಾರ್ತಾಹರಪ್ರೆಸ್ಸಿನಲ್ಲಿ ಮುದ್ರಿಸಿಪ್ರಸಿದ್ಧಮಾಡಿದರು.

No. B-1443

ವಿಜಯ

ನಿತ್ಯ ಪತ್ರ

- ಸ್ಥಾಪಕರು -
ಶ್ರೀ. ... ಆಚಾರ್ಯ ...
(೧೯೨೦)

ಬೆಲೆ ೬ ಪೈ

ವರ್ಷ ೧) ಧಾರವಾಡ, ಶುಕ್ರವಾರ ತಾ॥ ೨೪ ನೇ ಮಾರ್ಚ ೧೯೨೨. (ಸಂಚಿಕೆ ೬.

ಅತ್ಯಾನಂದ ! ಅಮೂಲ್ಯಸಂಧಿ !! ಅತ್ಯುತ್ತಮಸಂಧಿ !!!

-: ಜಂಗೀಜಲಸಾ :-

ತಾ. ೨೪ ೨೨ ನೇ ದಿವಸ ಹಗಲು ೫॥ ಗಂಟೆಗೆ
ವ್ಹಿಕ್ಟೋರಿಯಾ ಥಿಯೇಟರ ಧಾರವಾಡದಲ್ಲಿ
ಪ್ರೊ. ರಹಿಮತಖಾನರವರ ಜಂಗೀಜಲಸಾ-
ಖಾಸ ಮುಸಲಮಾನ ಬಾಂಧವರಿಗಾಗಿ
‘ **ಗಜಲಾಕವಾಲಿಯಾ** ’ ಗಾಯನವಮಾಡುವರು.
ಲೋಕಾಗ್ರಹಕ್ಕಾಗಿ
ಜಲತರಂಗವನ್ನು ಹೆಚ್ಚುವೇಳೆ ಬಾರಿಸುವರು.
ಈ ಉತ್ತಮ ಸಂಧಿಯನ್ನು ಕಳೆದುಕೊಳ್ಳಬೇಡಿರಿ
ಟಿಕೀಟಿನ ದರಗಳು:- ೨॥, ೨, ೧॥, ೧, ॥, ।=, ವಿಶೇಷ ಮಾತಿ ಹಸ್ತಪತ್ರಿಕೆಯಲ್ಲಿ.

ವ್ಯವಸ್ಥಾಪಕ.

ಅಸಹಯಜ್ಞಾಹುತಿಯಲ್ಲಿ ಕೊನೆಯ ಪೂರ್ಣಾಹುತಿ

——(:)(०)(·)

ಹಿಂದೂ ಜನರು ಸ್ವರಾಜ್ಯ ಪ್ರಾಪ್ತಿಗಾಗಿ ಸನದಶೀರ ಮಾರ್ಗದಿಂದ ನಡೆಯುವ ಕೃತನಿಶ್ಚಯ ಮಾಡಿ, ಕಾಂಗ್ರೇಸ ಆಜ್ಞೆಗಳನ್ನು ಅಕ್ಷರಶಃ ಪಾಲಿಸುತ್ತಲೇ ಹೊರಟರು. ಇವರ ಹೇಳಿ ಕೇಳಿಕೆಗಳೆಲ್ಲ ಮುಗಿದು ಹೋದವು. ಕಡೆಗೆ ೧೯೨೧ರಲ್ಲಿ ಅಸಹಯೋಗವು ಪ್ರಾರಂಭವಾಯಿತು. ಈ ಅಸಹಯೋಗವೆಂದರೆ ಆತ್ಮಾರ್ಪಣವು.

ಆತ್ಮಾರ್ಪಣೆಯ ಕಾಲವೇ ಇದಲ್ಲ. ಸ್ವಾರ್ಥಪರಾಯಣರ ಕಾಲವಿದು. ಆದ್ದರಿಂದ ಅಸಹವು ಸಹಜವಾಗಿ ಸಾಯುವದೆಂದರು. ಸ್ವನೇತಾಭಿಮಾನದಿಂದ ಪ್ರೇರಿತರಾದವರು ಆತ್ಮಾರ್ಪಣಕ್ಕೆ ಹಿಂಜರಿಯುವರೇ ! ಕಾಂಗ್ರೇಸ ಆಜ್ಞೆಯಂತೆ ನಡೆಯಲು ನಾವಿರಾಯಿವೀರರು ಮುಂದೊರೆದರು. ಈ ವೀರಗರ್ಜನೆಯನ್ನಡಗಿಸುವದಕ್ಕಾಗಿ ಯುವರಾಜರನ್ನು ಕರೆಯಿಸಿ, ಅಸಹವನ್ನು ಕುಗ್ಗಿಸಬೇಕೆಂದು ಆಳರಸರು ಹೊಂಚು ಹಾಕಿದರು. ಅದು ಒಗೆ ಹರಿಯಲಿಲ್ಲ. ಯುವರಾಜರು ನಮ್ಮ ಪ್ರೀತಿ ವಿಶ್ವಾಸಗಳಿಗೆ ಪೂರ್ಣಪಾತ್ರರಿದ್ದರೂ ರಾಷ್ಟ್ರಾಜ್ಞೆಯು ಸದ್ಯದ ಪ್ರಸಂಗದಲ್ಲಿ ಅವರ ಸನ್ಮಾನಾದಿ ಕೃತಿಗಳಿಗೆ ಹರತಾಳವನ್ನು ಹಾಕಬೇಕೆಂದು ಆಯಿತು. ಯುವರಾಜರಿಗೆ ೧೭ನೇ ನವ್ಹಂಬರದಿಂದ ೧೭ನೇ ಮಾರ್ಚ ವರೆಗೆ ಹರತಾಳವು ಪಡೆದಲ್ಲಿ ಹಿಂದೀ ಜನರು ತಮ್ಮ ಮನೋದಯವನ್ನು ಸರಿಯಾಗಿ ವ್ಯಕ್ತಗೊಳಿಸಿದರು.

ಅಸಹಯೋಗದಿಂದಲೇ ಕೆರಳಿ ಗೆದ್ದ ಆಳರಸರು, ಯುವರಾಜರಿಗಾದ ಹರತಾಳದ ಅಪಮಾನವನ್ನು ಕಂಡು ಮತ್ತಿಷ್ಟು ಕೆರಳಿ ಗೆದ್ದರು ಇತ್ತ ಹಿಂದೂ-ಮುಸಲ್ಮಾನರಾದರೋ ಅಸಹಕ್ಕಾಗಿ ಆತ್ಮಾರ್ಪಣೆಗೆ ಸನ್ನದ್ಧರಾಗಿದ್ದರು. ಅಸಹಯಜ್ಞಕ್ಕೆ ಒಂದೊಂದೇ ಆಹುತಿಗಳಾಗಕೊಡಹತ್ತಿದವ ಒಟ್ಟು ಹಿಂದೊಮ್ಮಿಂತೆ ಸಾವಿರಾರು ವೀರರು ಆಹುತಿಗಾಗಿ ಮುಂದೊರೆದರು. ತುರಂಗ ವಿಧ್ಯಕ್ಕಾಗಿ ಯಕ್ಷಿಂಗಿತ್ತಾದರೂ ಹಿಂಜರಿಯಲಿಲ್ಲ, ಆಳರಸರಾದರೂ ಆಹುತಿ ಕೊಡುವಲ್ಲಿ ಹಿಂಜರಿದರೇನು? ಛೇ ಆ ಸೊಲ್ಲೇ ಕೇಳಬೇಡಿರಿ. ಅವರೂ ಉದಾರ ಧೋರಣದಿಂದ ರಾಷ್ಟ್ರದ ಎಲ್ಲ ಮುಂದಾಳುಗಳನ್ನು ಆಹುತಿ ಗೊಂಡರು. ಯುವರಾಜರು ಹಿಂದುಸ್ಥಾನವ ಹೊರಗೆ ಹೋಗುವ ದಿವಸವು ಸಮೀಪಿಸಿತು. ಅಸಹಯಜ್ಞದ ಪೂರ್ತಿಯೂ ಸಮೀಪಿಸಿತು. ಕೊನೆಯ ಪೂರ್ಣಾಹುತಿಗೆಂದು ದೊಡ್ಡ ಆಹುತಿಯನ್ನೇ ಕೊಡುವದಕ್ಕಾಗಿ ಅಸಹಪ್ರವರ್ತಕ ಮಹಾತ್ಮರನ್ನೇ ಒಂದಿಸಿದರು ಯುವರಾಜರು ಹಿಂದುಸ್ಥಾನದ ದಂಡೆಯನ್ನು ಬಿಟ್ಟರು. ಅಸಹ ಯಜ್ಞದ ಪೂರ್ಣಾಹುತಿಯಾಯಿತು. ಮಹಾತ್ಮರಿಗೆ ಶಿಕ್ಷೆಯಾಯಿತು. ಅಸಹಯಜ್ಞವು ಮುಗಿಯಿತು.

ಯಜ್ಞಮಾಡುವದು ಇಷ್ಟಹೇತುವಿನ ಸಿದ್ಧಿಗಾಗಿ ಆತ್ಮಾರ್ಪಣವನ್ನೀಯುವದೂ ಇಷ್ಟಹೇತುವಿನ ಸಿದ್ಧತೆಗಾಗಿ ಹಿಂದುಸ್ಥಾನದ ಸಾವಿರಾರು ತರುಣರು, ಇಷ್ಟಹೇತುವಿನ ಸಿದ್ಧತೆಗಾಗಿಯೇ ಆಳರಸರಿಂದ ಈ ಯಜ್ಞವನ್ನು ಮಾಡಿಸಿದರು ಯಜ್ಞವು ಮುಗಿಯಿತು. ಇಷ್ಟಹೇತುವ ಸಫಲವಾಗುವ ದಿವಸಗಳಾ ತೀರ ಸಮೀಪಿಸಿದವು ಇನ್ನೇನು ಯಜ್ಞಪೂರ್ತಿಯ ನಂತರ ದಾನಾದಿಗಳಿಂದ ಋತ್ವಿಜರನ್ನೂ, ಬ್ರಾಹ್ಮಣಾದಿಗಳನ್ನೂ ಸಂತುಷ್ಟಗೊಳಿಸಿದರಾಯಿತು ಇಷ್ಟವು ಸಾಧ್ಯವಾಯಿತೆಂತಲೇ ತಿಳಿಯತಕ್ಕದ್ದು

ಆದಕ್ಕಾಗಿ ಹಿಂದವಾಸಿಗಳೇ! ಯಜ್ಞಕ್ಕೆ ಬಂದವರನ್ನು ಸಂತೋಷಗೊಳಿಸುವದಕ್ಕಾಗಿ ಖಾದಿಯನ್ನು ಧರಿಸಿರಿ ಅಸ್ಪೃಶ್ಯತೆಯನ್ನು ಹೊಡೆದೋಡಿಸಿರಿ ಐಕ್ಯವನ್ನು ಬೆಳೆಸಿರಿ ಶಾಂತಿಯ ಆಚರಣೆಯಿಂದ ನಿಮ್ಮ ಇಷ್ಟಹೇತುವಾದ ಸ್ವರಾಜ್ಯವು ತಪ್ಪದೆ ದೊರೆಯುವದು ...ನ್ನು ಹಾಕುವಳು

....

ಶ್ರೀ ಮಳೆಬೆನ್ನೂರ, ಧವಳ ಇವರ ಜುಲ್ಮಿ

——

೨೫-೩ ಶನಿವಾರ ಮಧ್ಯಾಹ್ನದ ೧೨ಕ್ಕೆ ಹರಾಜು

—— ——

ಮೆಸರ್ಸ ಧವಳೆ, ಶಹಾಗೂ ರಾಣೆಬೆನ್ನೂರ ಇವರ ಮೇಲಿನ ೧೨೫ ಅ ಕಲಮು ಪ್ರಕಾರ ಕೊಂತಕರಾಗಿ ಜಾಮೀನು ಯಾಕೆ ತೆಗೆದುಕೊಳ್ಳಬಾರದೆಂಬದಾಗಿ ೧೯೨೨ರಲ್ಲಿ ಮ್ಯಾ. ಕಲೆಕ್ಟರರಿಂದ ನೋಟೀಸು

ಹೊರಟಿತ್ತಷ್ಟೇ! ಅವರ ಪೋಲಿಸ ಖಾತ್ಯೆಯು ೧೮ ಹಾಗೂ ೨೩ ನೇ ಎರಡು ದಿವಸ ನಡೆದು ಸಾಕ್ಷಿ ಪುರಾವೆಗಳೆಲ್ಲ ಮುಗಿದವು. ಅವರ ಸ್ಟೇಟಮೆಂಟ ಸಹ ಆಗಿ ಹೋಯಿತು. ಇನ್ನು ತೀರ್ಪು ಮಾತ್ರ ಉಳಿದದೆ. ಅದೂ ೨೫-೩-೨೨ನೇ ದಿನ ಮಧ್ಯಾಹ್ನದ ಸುಮಾರು ೧೨ ಗಂಟೆಗೆ ಹೇಳುವೆನೆಂದು ಮ್ಯಾಜಿಸ್ಟ್ರೇಟರವರು ಹೇಳಿದ್ದಾರೆ,

---

ಚೌರೀ-ಚೌರಾ ದಂಗೆಯ ಸರಕಾರ ಪ್ರೆಸ್‌ನೋಟ.

ಚೌರೀ- ಚೌರಾ ಹಾಗೂ ಬರೇಲಿ ಸಂಬಂಧದ ಗೋಳೀಬಾರಿನ ವಿಷಯವಾಗಿ ಸರಕಾರದವರು ಪ್ರೆಸನೋಟ ತೆಗೆದಿರುವದೇನಂದರೆ —

ಶಕ್ತ್ಯತೀ ಅತ್ಯಾಚಾರವಿರುತ್ತದೆಂದೆನ್ನುವವರ ಅಸಹಕಾರಿಗಳೇ ಎರಡೂ ಕಡೆಯ ದಂಗೆಗೆ ಕಾರಣರಾಯಿತೆಂದು ಕಮಿಶನರರ ರಿಪೋರ್ಟನಿಂದ ಕಂಡು ಬರುವದು. ಗೋಳೀಬಾರು ಮಾಡಿದ್ದು ಯೋಗ್ಯವಿತ್ತು. ಅವಶ್ಯವೂ ಇತ್ತು ಎಂಬದಾಗಿ ಗವ್ಹರ್ನರ ಇನ್ ಕೌನ್ಸಿಲರವರ ಮತವಾಗಿದೆ. ಗೋಳೀಬಾರು ಮಾಡುವದು ಟೊಂಕದ ಕೆಳಗೇ ಮಾಡಬೇಕು. ಪೋ. ಸ್ಟೇಶನ್ ಸಂರಕ್ಷಿಸಬೇಕು. ಸ್ಪೇಶಲ್ ಪೋ. ರನ್ನಿಡುವ ಸೂಚನೆಯನ್ನು ಗೋರಖಪೂರ ಹಾಗೂ ಬರೇಲಿಯ ಕಮೀಶನರು ಸೂಚಿಸಬೇಕು. ದೇಶಕಾರ್ಯಕ್ಕಾಗಿ ೨೩ ಪೋ. ರು ಆಹುತಿಯಾದರು. ಅವರ ಪ್ರಾಣಹಾನಿಯಬಗ್ಗೆ ಗವ್ಹರ್ನರ ಇನ್ ಕೌನ್ಸಿಲರವರಿಗೆ ಖೇದವಾಗಿದೆ. ಆಬಗ್ಗೆ ಅವರ ಆಪ್ತೇಷ್ಟರಿಗೆ ಸಹಾನುಭೂತಿಯನ್ನು ತೋರಿಸಿ, ತೊಂದರೆ ಪ್ರಸಂಗದಲ್ಲಿ ತೋರಿಸಿದ ಧೈರ್ಯಕ್ಕಾಗಿ, ಡಿ. ಮ್ಯಾ, ಹಾಗೂ ಸು. ಪೋ. ಹಾಗೂ ಇತರ ಪೋ. ಅಧಿಕಾರಿಗಳ ಅಭಾರಮನ್ನಿಸುವರು,

---

ನನ್ನ ಆಯುಷ್ಯದಲ್ಲಿಯ ಅತ್ಯಂತ ದುಃಖದ ದಿವಸವು.

